# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 10 Reg. No. : KARBIL / 2005 / 16123 ಒಕ್ಟೋಬರ್ - 2021 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ 10 ಪ್ರಕಟಣೆ : 9-10-2021


## ಈ ಬಂಧ ~ ಅನುಬಂಧ



ಹೃದಯ ತರಂಗಗಳು
ಹೃದಯಾಂತರಂಗದಲಿ
ಮೇಳೈಸಲಿ
ನಿಮ್ಮೀ
ವಿವಾಹ ಮಹೋತ್ಸವವು
**ನಿತ್ಯೋತ್ಸವವಾಗಲಿ.**

ಬೆಂಗಳೂರು ಶ್ರೀ ಭಾಗ್ಯಚಂದ್ರ ರಾವ್ ಮತ್ತು ಶ್ರೀಮತಿ ಆಶಾ ರಾವ್ ದಂಪತಿಗಳ ಸುಪುತ್ರಿ **ಚಿ। ಸೌ। ಮೇಘನಾ** ಹಾಗೂ ಕುಕ್ಕೆಹಳ್ಳಿ ಶ್ರೀ ಮಹೇಶ ರಾವ್ ಮತ್ತು ಶ್ರೀಮತಿ ರಾಜೇಶ್ವರಿ ದಂಪತಿಗಳ ಸುಪುತ್ರ **ಚಿ। ಕಾರ್ತಿಕ್** ಇವರ ವಿವಾಹವು 'ಶಾರದಾ ಕಲ್ಯಾಣ ಮಂಟಪ ಉಡುಪಿ'ಯಲ್ಲಿ ತಾ. 16-09-2021ನೇ ಗುರುವಾರ ಹಿರಿಯರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ನೂತನ ವಧೂವರರನ್ನು ಭಗವಂತನು ಅಷ್ಟೈಶ್ವರ್ಯ ನೀಡಿ ಹರಸಲಿ ಎಂದು ಹಾರೈಸೋಣ.

ಶ್ರೀಮತಿ ಕುಸುಮಾ ನವೀನ್ ಕುಮಾರ್, ಮಂಗಳೂರು

## ಹರಕೆ ~ ಹಾರೈಕೆ

ವಿವಾಹ ಜೀವನ
ಎರಡು 'ಜೀವ'-'ನದಿ'ಗಳ ಸಂಗಮ
ಒಂದಾಗಿ ಬೆರೆತು ಒಂದಾಗಿ ಹರಿದು
ಮನಕೆ - ಜಗಕೆ ತಂಪೂಣಿಸಲಿ -
**ಶುಭವಾಗಲಿ.**



ಸಾಂತೂರು ಶ್ರೀ ಜನಾರ್ದನ ರಾವ್ ಮತ್ತು ಶ್ರೀಮತಿ ಶುಭಾ ದಂಪತಿಗಳ (ನಂದಿಕೂರು) ಸುಪುತ್ರ **ಚಿ। ಪುನೀತ್** ಹಾಗೂ ಶಂಕರನಾರಾಯಣ ಶ್ರೀ ದಯಾನಂದ ರಾವ್ ಮತ್ತು ಶ್ರೀಮತಿ ಸವಿತಾ ದಂಪತಿಗಳ ಸುಪುತ್ರಿ **ಚಿ। ಸೌ। ಶ್ರೇಯಾ**ರವರೊಂದಿಗೆ ಹಾಲಾಡಿ 'ಶಾಲಿನಿ ಜೆ. ಶಂಕರ ಸಭಾಭವನ'ದಲ್ಲಿ ತಾ. 3-09-2021ರಂದು ವಿಜೃಂಭಣೆಯಿಂದ ನೆರವೇರಿತು.

ನೂತನ ವಧೂವರರನ್ನು ಭಗವಂತನು ಅಷ್ಟೈಶ್ವರ್ಯ ನೀಡಿ ಹರಸಲಿ ಎಂದು ಹಾರೈಸೋಣ.

ಶ್ರೀಮತಿ ಕುಸುಮಾ ನವೀನ್ ಕುಮಾರ್, ಮಂಗಳೂರು

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ
ದಿನಾಂಕ **17-10-2021**ನೇ ಆದಿತ್ಯವಾರದಂದು
**'ನಾಡಹಬ್ಬ'**ವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ
ಆಚರಿಸಲಾಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಅದೇ ದಿನ ಬೆಳಗ್ಗೆ ಗಂಟೆ 10-00ರಿಂದ ರೋಟರಿ ಕ್ಲಬ್, ಮಂಗಳೂರು ಹಿಲ್‌ಸೈಡ್ ವತಿಯಿಂದ
**ಉಚಿತ ಇ.ಸಿ.ಜಿ. ಸಹಿತ ಹೃದಯ ತಪಾಸಣೆ ಮತ್ತು ರಕ್ತದಾನ ಶಿಬಿರ**

### ಕಾರ್ಯಕ್ರಮಗಳು

ಬೆಳಗ್ಗೆ 8-30ರಿಂದ : ಉಪಾಹಾರ

ಬೆಳಗ್ಗೆ 9-00ರಿಂದ : **ಲಲಿತಾ ಸಹಸ್ರನಾಮ ಪಾರಾಯಣ ಮತ್ತು ಭಜನೆ**
ಶ್ರೀ ಶಾರದಾಂಬ ಭಜನಾ ಮಂಡಳಿ ಸದಸ್ಯರಿಂದ

10-30ರಿಂದ 11-30 : **ಸುಗಮ ಸಂಗೀತ** (ಭಕ್ತಿಗೀತೆ, ಜಾನಪದ ಗೀತೆ, ಭಾವಗೀತೆ) **ಸ್ಪರ್ಧೆ**
ವಿಭಾಗ 1 : 5 ವರ್ಷದಿಂದ 15 ವರ್ಷದ ವರೆಗೆ
ವಿಭಾಗ 2 : 16 ವರ್ಷದಿಂದ 50 ವರ್ಷದ ವರೆಗೆ
ವಿಭಾಗ 3 : 51ರಿಂದ ಮೇಲ್ಪಟ್ಟು

11-30ರಿಂದ 12-00 : **ಹುಲಿ ಕುಣಿತ ಸ್ಪರ್ಧೆ**
(ಮಹಿಳಾ ವಿಭಾಗ ಮತ್ತು ಪುರುಷರ ವಿಭಾಗ)

12-15ರಿಂದ 1-00 : **ಪ್ರತಿಭಾ ಪುರಸ್ಕಾರ**
ದಿ। ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳ್ಯಾ ಇವರಿಂದ
ನಿರ್ವಹಣೆ : ಶ್ರೀ ಕೆ. ಸದಾಶಿವ ಶಾಸ್ತ್ರಿ

ಮಧ್ಯಾಹ್ನ 1-00ರಿಂದ : **ಭೋಜನ**

2-00ರಿಂದ : ಯಕ್ಷಗಾನ - **'ಮನ್ಮಥ ವಿವಾಹ'**
ನಿರ್ದೇಶನ : ಶ್ರೀ ಸಂಜಯ ಕುಮಾರ ಪಲಿಮಾರ್
ಯಕ್ಷಗಾನ ಪ್ರಾಯೋಜಕರು : ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್



ಸಂಜೆ 5-00ರಿಂದ : **ಬಹುಮಾನ ವಿತರಣೆ, ಧನ್ಯವಾದ, ರಾಷ್ಟ್ರಗೀತೆ**

ಬಹುಮಾನ ಪ್ರಾಯೋಜಕರು : ಶ್ರೀ ನಂದಿಕೂರು ಜನಾರ್ದನ ರಾವ್, ಶ್ರೀಮತಿ ಸ್ನೇಹಲತಾ ದಿವಾಕರ್
ಶ್ರೀ ಪ್ರವೀಣ್ ಕುಮಾರ್ ಅದ್ಯಪಾಡಿ, ಡಾ। ಜಯಲಕ್ಷ್ಮೀ

---

ಸಮಾಜ ಬಾಂಧವರೇ,

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದಿನಾಂಕ **06-11-2021**ನೇ ಶನಿವಾರ ಸಂಜೆ ಗಂಟೆ **5-30**ಕ್ಕೆ

**ದೀಪಾವಳಿ ಆಚರಣೆಯನ್ನು**

ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ವಿನೋದಾತ್ಮಕ ಆಟಗಳು, ಮನೋರಂಜನಾ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ವಿನಂತಿಸುತ್ತೇವೆ.
ಆ ದಿನದ ಖರ್ಚುಗಳನ್ನು ಧನಸಹಾಯದ ಮೂಲಕವೂ ಪ್ರಾಯೋಜಿಸಬಹುದು.

**ಹೆಚ್ಚಿನ ಮಾಹಿತಿಗಾಗಿ**

| | |
|---|---|
| ಶ್ರೀ ಮನೀಶ್ ರಾವ್ ಯು. | ✆ : 9448726499 |
| ಶ್ರೀ ಸುರೇಶ್ ಕಡಬ | ✆ : 9972760673 |
| ಶ್ರೀಮತಿ ಕುಸುಮಾ ನವೀನ್ ಕುಮಾರ್ | ✆ : 9480760904 |
| ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ | ✆ : 9739155359 |

ಅಧ್ಯಕ್ಷರು ಮತ್ತು ಸರ್ವ ಸದಸ್ಯರು

---

- ಕಲಿಯಲು ತಿರಸ್ಕರಿಸುವುದು ಜೀವಿಸಲು ತಿರಸ್ಕರಿಸುವುದಕ್ಕೆ ಸಮನಾದುದು. – ಶ್ರೀ ರಾಮಕೃಷ್ಣ ಪರಮಹಂಸ
- ಪ್ರಮುಖ ತತ್ವಗಳು ಬದಲಾಯಿಸಲಾರದಷ್ಟು ದೃಢವಾಗಿರಬೇಕು. – ಅಬ್ರಹಾಂ ಲಿಂಕನ್

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್
ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ
ರಘುವೀರ್ ಪೆರ್ಡೂರು
ಟಿ. ಬಿ. ಮೋಹನ್ ರಾವ್
ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳೆ
ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ


## ಗಝಲ್

ಸರಳ ಬದುಕಿನ ಸವಿಯ ಅರಿಯುತ
ನಡೆಯುವವರು ಸಿಗುವುದು ವಿರಳ
ಪ್ರೀತಿ ಸ್ನೇಹದ ಒಲುಮೆ ಸುಧೆಯನು
ಹರಿಸುವವರು ದೊರೆವುದು ವಿರಳ

ತನ್ನದಲ್ಲದ ತಪ್ಪಿಗೆ ಶಿಕ್ಷೆಯ
ಪಡೆಯುವ ಸ್ಥಿತಿಯದು ಸಾಧುವೆ
ಮುನಿಯ ಶಾಪಕೆ ಅಹಲ್ಯೆಯಂತೆ
ಕಲ್ಲಾದವರು ಕಾಣುವುದು ವಿರಳ

ಸ್ವಂತ ಲಾಭಕೆ ಮನೆಯನು ತೊರೆವ
ಮನುಜನೆ ತುಂಬಿಹ ಜಗದೊಳಗೆ
ತಂದೆಯ ಮಾತಿಗೆ ರಾಜ್ಯವ ತೊರೆಯುತ
ಬಾಳಿದವರು ಇರುವುದು ವಿರಳ

ಕೊನೆಯ ಉಸಿರಿನ ತನಕವು ಸತ್ಯವ
ಬಿಡದೆ ಧರಿಸುವ ಕಠಿಣದ ವ್ರತವು
ಹೆಂಡತಿ ಮಕ್ಕಳ ತೊರೆದರು ದಿಟವನು
ಎತ್ತಿ ಹಿಡಿಯುತ ಬಾಳುವುದು ವಿರಳ

ನಿತ್ಯ ಅನಿತ್ಯದ ವಿವೇಕ ಪಡೆಯದೆ
ವಿಪುಲ ಜ್ಞಾನದ ಬೆಳಕು ಕಾಣದು
ಜರೆಯನು ಅಪ್ಪುವ ಮುನ್ನವೆ ಜನುಮದಿ
ನಿಜ ವೈರಾಗ್ಯ ತೋರುವುದು ವಿರಳ

– ಡಾ। ವೀಣಾ ಎನ್. ಸುಳ್ಯ

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ


ಪುತ್ತೂರಿನ 'ಶಿವಸದನ'ವು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದಲ್ಲಿ ಆರಂಭಿಸಿರುವ ಹಿರಿಯ ನಾಗರಿಕರ ವಸತಿಗೃಹ ನೂತನ ಯೋಜನೆಗೆ ಸಮಾಜ ಬಾಂಧವರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಶ್ರೀ ಸಭಾದ ಸಮಾಜಮುಖೀ ಕಾರ್ಯಕ್ಕೆ ಧನಸಹಾಯವನ್ನು ನೀಡಿ ಉತ್ಸಾಹ ತುಂಬಿ ಸಮಾಜಕ್ಕೆ ಮಾದರಿಯಾಗುತ್ತಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಇವರ ಈ ಕಾರ್ಯವು ಇತರರಿಗೂ ಪ್ರೇರಣದಾಯಕವಾಗಲಿ ಹಾಗೂ ಶ್ರೀ ಸಭಾದ ನೂತನ ಯೋಜನೆಗಳಿಗೆ ಇನ್ನಷ್ಟು ನೆರವು ಹರಿದು ಬರಲಿ ಎಂದು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತ ಮಂಡಳಿ ಹಾರೈಸುತ್ತಿದೆ.

'ಶಿವಸದನ' ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 20ಕ್ಕೂ ಹೆಚ್ಚು ನಿವಾಸಿಗಳಿದ್ದು, ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಈ ಮಾಹಿತಿಯನ್ನು ನೀಡಿ, ಸಹಕರಿಸಿ.

**ಸಂಪರ್ಕಿಸಿ : ಶ್ರೀ ಕರುಣ್ ರಾವ್ ಬೆಳ್ಳೆ ಮೊಬೈಲ್ : 7337634359**
**ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 7795116598**


Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028



ಪತ್ರಿಕೆಗೆ ಶುಭ ಹಾರೈಕೆಗಳು—

ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
ಮಂಗಳೂರು - 575 002
P : 9686258216


## 'ಇಂಡಿಯನ್ ಮೆಡಿಕಲ್ ಅಸೋಸಿಯೇಶನ್, ಮಂಗಳೂರು'

ವತಿಯಿಂದ

**ದಿನಾಂಕ 25–09–2021ರಂದು ಶಿಕ್ಷಕರ ದಿನಾಚರಣೆಯ ಅಂಗವಾಗಿ ನಡೆದ ಸಮಾರಂಭದಲ್ಲಿ ಹಿರಿಯ ವೈದ್ಯರಾದ**

### ಡಾ। ಬಿ. ಹೆಚ್. ಕೃಷ್ಣಮೂರ್ತಿ ರಾವ್

ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.



ಮಂಗಳೂರಿನ ಜನಪ್ರಿಯ ವೈದ್ಯರಾದ ಶ್ರೀಯುತರು ಅಸೋಸಿಯೇಶನ್ ಆಫ್ ಫಿಜೀಶಿಯನ್ಸ್ ಆಫ್ ಇಂಡಿಯಾ ಇದರ ಮಂಗಳೂರು ಶಾಖೆಯ ಸ್ಥಾಪಕಾಧ್ಯಕ್ಷರೂ, ಇಂಡಿಯನ್ ಮೆಡಿಕಲ್ ಅಸೋಸಿಯೇಶನ್‌ನ ಮಾಜಿ ಅಧ್ಯಕ್ಷರೂ ಆಗಿದ್ದರು. ಅಲ್ಲದೆ 1972ರಿಂದ 2010ರ ತನಕ ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ್ದರು.

ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಶ್ರೀಯುತರ ಸಾರ್ಥಕ ಬದುಕನ್ನು ಗೌರವಿಸುತ್ತದೆ. ಭಗವಂತನು ಅವರಿಗೆ ಇನ್ನೂ ಹೆಚ್ಚು ಸೇವೆ ಮಾಡುವ ಶಕ್ತಿಯನ್ನು ಕರುಣಿಸಲೆಂದು 'ಜ್ಞಾನಶಕ್ತಿ' ಬಳಗವು ಹಾರೈಸುತ್ತದೆ.

## ಸೋಲದಿರು ನೀನು

ಕಣ್ಣು ಮುಚ್ಚಲು ಮನವು ಮುಚ್ಚದು
ಕಿವಿಯ ಮುಚ್ಚಲು ಮಾತು ನಿಲ್ಲದು
ಉಸಿರನಾಡಲು ಉಸಿರು ಕೇಳದೆ
ನಿಂತು ಹೋಗದೆಯೇ
ಯಾವ ಕಾರಣ ಯಾವ ಕಾರ್ಯಕೆ
ನನ್ನ ಜೀವವು ಬಾಳಬೇಕಿದೆ
ಎಂಬ ಯೋಚನೆ ಮತ್ತೆ ಮತ್ತೆಯೇ
ಮೂಡಿ ಬರುತಿರಲು

ಮನದ ಆಳದಿ ಅಗ್ನಿ ಪರ್ವತ
ಚಿಮ್ಮಿ ಸುಡುತಿದೆ ಜೀವ ಜೀವವ
ನರನರಗಳಲಿ ಸೆಟೆದು ನಿಲ್ಲುತ
ಬೆಂಕಿ ಉಗುಳುತಿರೇ
ಹೆಜ್ಜೆ ಹೆಜ್ಜೆಗೂ ಎಡವಿ ಬೀಳಲು
ಹಿಡಿದ ಕರವದು ಬಿಸಿಲಕೋಲದು
ನುಗ್ಗಿ ನಡೆಯಲು ಸೋತು ಹೋದೆನು
ಏಳಲಾರದೆಯೇ

ದಿನಪ ಕಿರಣಕೆ ನಗುವ ತೃಣವನು
ಕಂಡು ಮನದಲಿ ಏನೋ ಮಿಂಚಲು
ಬದುಕಿ ಬಾಳುತ ಜಗವ ಬೆಳಗುವ
ಹೊಳಪು ಕಾಣಿಸಲು
ಏನೇ ಬಂದರು ಯಾರೇ ಹೋದರು
ನನ್ನತನವನು ಉಳಿಸಿ ಬೆಳೆಸುತ
ಆತ್ಮಸ್ಥೈರ್ಯವ ತುಂಬಿ ನಡೆಯುವ
ನಾವು ಜತೆಯಲ್ಲಿ

– ಡಾ। ವೀಣಾ ಎನ್. ಸುಳ್ಯ

## ಒಮ್ಮೆ ಯೋಚಿಸಿ?

**ಹುಟ್ಟು**
ನಾವು ಕೇಳದೇ ಸಿಗುವ ವರ (ಶಾಪ)

**ಸಾವು**
ನಾವು ಹೇಳದೇ ಹೋಗುವ ಸ್ಥಳ

**ಬಾಲ್ಯ**
ಮೈ ಮರೆತು ಆಡುವ ಸ್ವರ್ಗ

**ಯೌವನ**
ಅರಿವಿದ್ದರೂ ಅರಿಯದ ಮಾಯೆ

**ಮುಪ್ಪು**
ಕಡೇ ಅಂಕ ಕಡೇ ಆಟ

**ಸ್ನೇಹ**
ಶಾಶ್ವತವಾಗಿ ಉಳಿಯೋ ಬಂಧ

**ಪ್ರೀತಿ**
ಪ್ರಾಣಕ್ಕೆ ಹಿತವಾದ ಅನುಬಂಧ

**ಪ್ರೇಮ**
ತ್ಯಾಗಕ್ಕೆ ಸ್ಫೂರ್ತಿ

**ಕರುಣೆ**
ಕಣ್ಣಿಗೆ ಕಾಣುವ ದೇವರು

**ಮಮತೆ**
ಕರುಳ ಬಳ್ಳಿ

# ಸ್ಥಾನಿಕ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪುತ್ತೂರು ಅಂಬಿಕಾ ವಿದ್ಯಾಲಯದಲ್ಲಿ ಉಚಿತ ಶಿಕ್ಷಣ
## – ಶ್ರೀ ಸುಬ್ರಹ್ಮಣ್ಯ ನಟ್ಟೋಜ



ಸ್ಥಾನಿಕ ಮಹಾಮಂಡಲ (ರಿ.), ಮಂಗಳೂರು ಇದರ 9ನೇ ವಾರ್ಷಿಕ ಮಹಾಸಭೆ, ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ನೂತನ ಕಚೇರಿ ಉದ್ಘಾಟನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನೂತನ ಅಧ್ಯಕ್ಷರೂ, ಸಮಾಜದ ಉತ್ತಮ ಸಂಘಟಕರೂ ಆದ ಬೆಳ್ವಾಯಿ ಶ್ರೀ ಎಂ. ದೇವಾನಂದ ಭಟ್ ಇವರ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಜರಗಿತು.

ಪೂರ್ವಾಹ್ನ ಗಂಟೆ 9-00ರಿಂದ ಕಾರ್ಕಳ ಅನಂತಪದ್ಮನಾಭ ಭಟ್ ಬಳಗದಿಂದ ದಾಸಸಾಹಿತ್ಯ ಸಂಗೀತ ಕಾರ್ಯಕ್ರಮ ಆರಂಭಗೊಂಡಿತು.

ಮಹಾಸಭೆ ಉದ್ಘಾಟನೆಯನ್ನು ನಮ್ಮ ಪುತ್ತೂರು ಪ್ರತಿಷ್ಠಿತ ನಟ್ಟೋಜ ಮನೆತನದವರು, ಅಂಬಿಕಾ ವಿದ್ಯಾಸಮೂಹ ಸಂಸ್ಥೆಯ ಸ್ಥಾಪಕರೂ ಆದ ಶ್ರೀ ಸುಬ್ರಹ್ಮಣ್ಯ ನಟ್ಟೋಜ, ನೆರವೇರಿಸಿ ನಮ್ಮ ದೇಶದ ಸಾಂಸ್ಕೃತಿಕ ವ್ಯವಸ್ಥೆಯನ್ನು ಬುಡಮೇಲು ಮಾಡಿದ ಆ ಕಾಲದ ಬ್ರಿಟಿಷ್ ಆಡಳಿತದಲ್ಲೂ ಸ್ಥಾನಿಕರ ಸ್ಥಾನಮಾನಕ್ಕೆ ಕುತ್ತು ಒದಗಿತು. ಮುಂದೆ ಮೆಕಾಲೆ ಶಿಕ್ಷಣ ಪದ್ಧತಿಯಿಂದ ಎಲ್ಲಾ ಭಾರತೀಯ ಸಂಸ್ಕೃತಿ ಅಧಃಪತನ ಕಂಡಾಗಲೂ ಹಿಂದೂ ಸಂಸ್ಕೃತಿ ಎಲ್ಲವನ್ನೂ ಮರೆತು ಮೆಟ್ಟಿನಿಂತು ಮತ್ತೆ ಜೀವಂತಿಕೆ ತಳೆದು ಸ್ವಸಾಮರ್ಥ್ಯದಿಂದ ತಲೆಯೆತ್ತಿ ಮುಂದುವರಿಯಿತು. ಇದನ್ನು ಎಲ್ಲರೂ ಮೆಚ್ಚಿಕೊಂಡರು. ಇದರಂತೆ ನಮ್ಮ ಸಮಾಜವೂ ಕೂಡ ಶೃಂಗೇರಿ ಪೂಜ್ಯ ಶ್ರೀಗಳೇ ಆಶೀರ್ವಚಿಸಿದಂತೆ ಪಂಚದ್ರಾವಿಡ ಬ್ರಾಹ್ಮಣರಲ್ಲಿ ಸ್ಥಾನಿಕ ಬ್ರಾಹ್ಮಣರು, ಕೋಟ, ಶಿವಳ್ಳಿ, ಹವ್ಯಕ, ಕರಾಡ ಹೀಗೆಂದು ಸೂಚಿಸಿ ಅಗ್ರ ಪಂಕ್ತಿಯಲ್ಲಿ ಇರುವ ನಮ್ಮವರ ಕಾರ್ಯ, ಸೇವಾತತ್ಪರತೆ ಶ್ಲಾಘನೀಯ ಎಂದು ತಿಳಿಸಿರುತ್ತಾರೆ. ಇದು ನಮಗೆ ನಮ್ಮ ಸಮಾಜಕ್ಕೆ ಸಂದ ಗೌರವ. ಈಗಲೂ ಅಷ್ಟೇ ನಮಗೆ ಸಮಾಜ ಏನು ಕೊಟ್ಟಿತು ಎಂಬುದಕ್ಕಿಂತ ನಾವು ಸಮಾಜಕ್ಕೆ ಏನು ಕೊಟ್ಟೆವು ಎನ್ನುವುದು ಮುಖ್ಯ. ಆ ನೆಲೆಯಲ್ಲಿ ನಮ್ಮ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಸೂಚಿಸಿದ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಪುತ್ತೂರಿನ ನಮ್ಮ ಅಂಬಿಕಾ ವಿದ್ಯಾಲಯದಲ್ಲಿ ಉಚಿತ ಶಿಕ್ಷಣ ನೀಡುವ ಆಶ್ವಾಸನೆ ನೀಡುತ್ತಿದ್ದೇನೆ. ವರುಷ ಒಂದಕ್ಕೆ ಸಾಮಾನ್ಯ ಒಂದೂವರೆಯಿಂದ ಎರಡು ಲಕ್ಷ ವೆಚ್ಚ ತಗಲುವ ಈ ವ್ಯವಸ್ಥೆ ನಮ್ಮ ಸಮಾಜದ ಪೋಷಕರಿಗೆ ಉಪಯುಕ್ತವಾಗಲಿ. ಮಕ್ಕಳ ಭವಿಷ್ಯ ಉಜ್ವಲವಾಗಲಿ, ಶ್ರೀ ಎಂ. ದೇವಾನಂದ ಭಟ್ ಅಧ್ಯಕ್ಷತೆಯ ಮಹಾಮಂಡಲ ಸಮಿತಿಯು ಸಮಾಜದ ಉತ್ತಮ ಕೆಲಸಗಳಲ್ಲಿ ಮುಂದುವರಿಯಲಿ ಎಂದು ಶುಭ ಹಾರೈಸಿದರು.

ಮಂಗಳೂರು ಮಹಾನಗರ ಪಾಲಿಕೆಯ ಸದಸ್ಯೆ ಶ್ರೀಮತಿ ಸುಮಂಗಲಾ ಸುಧೀರ್ ಕೇದಗೆ ಮಂಡಲಕ್ಕೆ ಶುಭಾಶಯ ನೀಡಿ ಕೈಯ ಹತ್ತು ಬೆರಳುಗಳು ಜೊತೆಯಾಗಿ ಸೇರಿ ಕೆಲಸ ಮಾಡುವಂತೆ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ನೂತನ ಅಧ್ಯಕ್ಷರಾದಿಯಾಗಿ ಪದಾಧಿಕಾರಿಗಳು ಸದಸ್ಯರು ಎಲ್ಲರೂ ಸೇರಿ ಸಮಾಜ ಕಟ್ಟುವ ಕಾರ್ಯ ನಡೆಯಲಿ ಇದಕ್ಕೆ ನಮ್ಮ ಸಹಕಾರ ಇದೆ. ಎಲೆಮರೆಯ ಕಾಯಿಯಂತೆ ನಮ್ಮ ಸಮಾಜದ ಬಂಧುಗಳಿಗೆ ಸಹಾಯ ಮಾಡುವ ಮಂಡಲವು ಇನ್ನಷ್ಟೂ ವೃದ್ಧಿ ಹೊಂದಲಿ ಎಂದು ಶುಭಾಸಂಶನೆಗೈದರು. ಉಪಮೇಯರ್ ಗೌರವದ ಹುದ್ದೆ ಏರಿದ ನಮ್ಮ ಸಮಾಜದ ಮಹಿಳೆ ಎಂಬ ನೆಲೆಯಿಂದ ಮಂಡಲವು ಅವರನ್ನು ಗೌರವಿಸಿ ಸಮ್ಮಾನಿಸಿತು.

ಶ್ರೀ ಸುಬ್ರಹ್ಮಣ್ಯ ಸಭಾದ ಮೇಲಂತಸ್ತಿನಲ್ಲಿ ನೂತನ ಮಹಾಮಂಡಲದ ಕಚೇರಿಯನ್ನು ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಗೆ ಉದ್ಘಾಟಿಸಿದರು, ಜೊತೆಗೆ ಸಭಾದ ಪ್ರಧಾನ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ದೀಪ ಪ್ರಜ್ವಲನೆಗೈದರು. ಈ ಸಂದರ್ಭದಲ್ಲಿ ಅವರನ್ನು ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಶ್ರೀ ಹರ್ಷಕುಮಾರ್ ಕೇದಗೆಯವರು ಮಹಾಮಂಡಲಕ್ಕೆ ರೂ. 25,000/- ನೀಡಿ ಸದಸ್ಯರಾದರು.

ಡಾ| ವಿದ್ವಾನ್ ಗಾಳಿಮನೆ ವಿನಾಯಕ ಭಟ್ 'ಆಧುನಿಕತೆಯಲ್ಲಿ ಬ್ರಾಹ್ಮಣ್ಯ' ಎಂಬ ವಿಶೇಷದಲ್ಲಿ ಉಪನ್ಯಾಸ ನೀಡಿ ಬ್ರಾಹ್ಮಣರು ಇರಬೇಕಾದ ಅವರ ಕರ್ತವ್ಯ, ಅನುಷ್ಠಾನ, ಮತ್ತೆ ಬರುವ ಆತಂಕ, ಜಿಜ್ಞಾಸೆ ಬಗ್ಗೆ ಸವಿವರವಾಗಿ ನುಡಿದರು.


ಸಮಾಜದ ಬಂಧುಗಳಿಗೆ ಪೋಷಕ ಧನಸಹಾಯ ರೂಪಾಯಿ ಮೂರು ಸಾವಿರದಂತೆ ಬೇರೆ ಬೇರೆ ಸಂಘಗಳ ಹದಿನೈದು ಜನರಿಗೆ ನೀಡಿ ಪ್ರೋತ್ಸಾಹಿಸಲಾಯಿತು. ಪುತ್ತೂರು ಎನ್. ಎಸ್. ಜಗನ್ನಿವಾಸ ರಾವ್ ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸಿದರು. ಸ್ಥಾಪಕಾಧ್ಯಕ್ಷರಾದ ಶ್ರೀ ಸಿ. ಎಸ್. ರಾವ್ ಉಡುಪಿ ಮಾತನಾಡಿ ಮಂಡಲ ಬೆಳೆದು ಬಂದ ಹಾದಿ ನೆನಪಿಸಿ ಮುಂದೆ ಯೋಗ್ಯ ಹೆಜ್ಜೆಯೊಂದಿಗೆ ಎಲ್ಲರ ವಿಶ್ವಾಸಹೊಂದಿ ಬೆಳೆಯಲಿ ಎಂದು ಹಾರೈಸಿದರು. ಅಧ್ಯಕ್ಷ ಸ್ಥಾನದಿಂದ ಶ್ರೀ ಎಂ. ದೇವಾನಂದ ಭಟ್ ಮಾತನಾಡಿ ಮುಂದೆ ಮಹಾಮಂಡಲದ ಕಾರ್ಯ ಯೋಜನೆಗಳ ಬಗ್ಗೆ ವಿವರಿಸಿ ಅನೇಕ ಕಡೆಗಳಲ್ಲಿ ನಮ್ಮ ಸಂಘಟನೆ ಗಟ್ಟಿಯಾಗಬೇಕು. ಬೇರೆ ಕಡೆಯಲ್ಲಿಯೂ ನಮ್ಮವರು ಸಂಘ ಕಟ್ಟಲು ಪ್ರೋತ್ಸಾಹಿಸಬೇಕು. ಪ್ರತಿ ಸಂಘವೂ ಸ್ವಂತ ನಿವೇಶನವನ್ನು ಹೊಂದಬೇಕು. ಅಸಹಾಯಕರಿಗೆ ಧನಸಹಾಯ ಮಾಡುತ್ತಾ ಸಮಾಜದಲ್ಲಿ ಅವರನ್ನು ಮೇಲೆತ್ತುವ ಕಾರ್ಯ ಆಗಬೇಕು. ಇದಕ್ಕೆ ಸಮಾಜದ ಸಹಕಾರ ಆಶೀರ್ವಾದ ನಮ್ಮ ಹೊಸ ಆಡಳಿತಕ್ಕೆ ಅಗತ್ಯ ಬೇಕು ಎಂದು ಕೇಳಿಕೊಂಡರು.

ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿ ಡಾ| ವೈ. ಸುದರ್ಶನ್ ರಾವ್ ಉಡುಪಿ ವಾಚಿಸಿದರು.

2020-'21ನೇ ಸಾಲಿನ ಲೆಕ್ಕಪತ್ರಗಳನ್ನು ನಿಕಟ ಪೂರ್ವ ಕೋಶಾಧಿಕಾರಿಯಾದ ಶ್ರೀ ಉದಯಕುಮಾರ್ ಮಂಗಳೂರು ಮಂಡಿಸಿ ಅನುಮೋದನೆ ಪಡೆದರು. ಶ್ರೀಮತಿ ರಮ್ಯಾ ಅರುಣ್ ರಾವ್ ಮುಂಡ್ಕೂರು ನಿರೂಪಣೆಗೈದರು. ಕಾರ್ಯಕ್ರಮದಲ್ಲಿ ಧನ್ಯವಾದ ನೀಡಿದವರು ಉಪಾಧ್ಯಕ್ಷರಾದ ಶ್ರೀ ಉದಯ ಬಾರಕೂರು.

ಮುಂದೆ ಭೋಜನ ಕೂಟದ ಬಳಿಕ ಶ್ರೀ ಎಂ. ದೇವಾನಂದ ಭಟ್ ಸಂಯೋಜನೆಯಲ್ಲಿ ಸಮಾಜ ಬಾಂಧವರಿಂದ ಯಕ್ಷಗಾನ 'ಗದಾಯುದ್ಧ' ಜರಗಿತು. ಹೀಗೆ ದಿನಪೂರ್ತಿ ಜರಗಿದ ಮಹಾಮಂಡಲದ ಕಾರ್ಯಕ್ರಮದಲ್ಲಿ ನಮ್ಮ ಸಮಾಜದ 15 ಸಂಘಗಳಲ್ಲಿ 12 ಸಂಘದ ಅಧ್ಯಕ್ಷರು ವೇದಿಕೆಯಲ್ಲಿ ಉಪಸ್ಥಿತರಿದ್ದು ಒಟ್ಟು ಎಲ್ಲಾ ಊರಿನಿಂದ ಮುನ್ನೂರಕ್ಕೂ ಹೆಚ್ಚು ಸಮಾಜ ಬಾಂಧವರು ಭಾಗವಹಿಸಿ ಕಾರ್ಯಕ್ರಮ ಅಚ್ಚುಕಟ್ಟಾಗಿ ಮುಕ್ತಾಯಗೊಂಡಿತು.

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಯೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Manish Rao U.
Tel : (O) 2223301
Mobile : 9448726499 / 8884284939
NAVA COMPUTERS

Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

## ಹೊಸ ಬಾಳಿನ ಹೊಸಿಲಲಿ ನಿಂತಿರುವ...

ಬಾರ್ಕೂರು ಉದಯಕುಮಾರ್ ಮತ್ತು ಶ್ರೀಮತಿ ಅನುರಾಧಾ ಅವರ ಸುಪುತ್ರಿ **ಚಿ| ಸೌ| ಮೇಧಾ**ಳ ವಿವಾಹವು ಮಠಂತಬೆಟ್ಟು ಶ್ರೀ ಉಮೇಶ್ ರಾವ್ ಮತ್ತು ಶ್ರೀಮತಿ ವಿಜಯ ಕುಮಾರಿ ಅವರ ಸುಪುತ್ರ **ಚಿ| ಅನೀಶ್**ನೊಡನೆ ತಾ. 12-9-2021ನೇ ಆದಿತ್ಯವಾರ ಬ್ರಹ್ಮಾವರದ ಕುಂಕುಮ ಸಭಾಂಗಣದಲ್ಲಿ ನೆರವೇರಿತು.

****

ಬೆಂಗಳೂರಿನ ಶ್ರೀ ಭಾಗ್ಯಚಂದ್ರ ರಾವ್ ಮತ್ತು ಶ್ರೀಮತಿ ಆಶಾ ರಾವ್‌ರವರ ಸುಪುತ್ರಿ **ಚಿ| ಸೌ| ಮೇಘನಾ**ಳ ವಿವಾಹವು ಶ್ರೀ ಮಹೇಶ್ ರಾವ್ ಮತ್ತು ಶ್ರೀಮತಿ ರಾಜೇಶ್ವರಿಯವರ ಸುಪುತ್ರ **ಚಿ| ಕಾರ್ತಿಕ**ನೊಂದಿಗೆ ಉಡುಪಿಯ ಶಾರದಾ ಕಲ್ಯಾಣ ಮಂಟಪದಲ್ಲಿ ತಾ. 16-09-2021ನೇ ಗುರುವಾರದಂದು ನಡೆಯಿತು.

****

ಸಾಂತೂರು ಶ್ರೀ ಜನಾರ್ದನ ರಾವ್ ಮತ್ತು ಶ್ರೀಮತಿ ಶುಭಾ ದಂಪತಿಗಳ ಸುಪುತ್ರ **ಚಿ| ಪುನೀತ**ನ ವಿವಾಹವು ಶಂಕರನಾರಾಯಣ ಶ್ರೀ ದಯಾನಂದ ರಾವ್ ಮತ್ತು ಶ್ರೀಮತಿ ಸವಿತಾರವರ ಸುಪುತ್ರಿ **ಚಿ| ಸೌ| ಶ್ರೇಯಾ**ಳೊಂದಿಗೆ ತಾ. 3-9-2021ನೇ ಶುಕ್ರವಾರ ಹಾಲಾಡಿ ಶಾಲಿನಿ ಜೆ ಶಂಕರ ಸಭಾಭವನದಲ್ಲಿ ನೆರವೇರಿತು.

****

ಕರ್ವಾಲು ಸೋಮಶೇಖರ ರಾವ್ ಮತ್ತು ಶ್ರೀಮತಿ ಉಷಾ ದಂಪತಿಗಳ ಸುಪುತ್ರ **ಚಿ| ಶ್ರೀನಿಧಿ ರಾವ್**ನ ವಿವಾಹವು **ಚಿ| ಸೌ| ಶ್ವೇತಾ**ಳೊಂದಿಗೆ ತಾ. 12-9-2021ನೇ ರವಿವಾರ ಬೆಂಗಳೂರಿನ ಬಸವನಗುಡಿಯ ಜಿ.ಎಸ್.ಬಿ ಭವನದಲ್ಲಿ ನೆರವೇರಿತು.

*****

ಹೇರಂಜಾಲಿನ ಶ್ರೀ ಪದ್ಮನಾಭ ಮೇರ್ಟ ಮತ್ತು ಶ್ರೀಮತಿ ಶಾಂತಾ ದಂಪತಿಗಳ ಸುಪುತ್ರ **ಚಿ| ಸಂಜಯ ಮೇರ್ಟ**ನ ವಿವಾಹವು ಕುಂಜಿಬೆಟ್ಟು ಶ್ರೀ ಶ್ರೀನಿವಾಸ್ ರಾವ್ ಮತ್ತು ಶ್ರೀಮತಿ ಕ್ಷಮಾದೇವಿಯವರ ಸುಪುತ್ರಿ **ಚಿ| ಸೌ| ಶ್ರೀರಕ್ಷಾ**ಳೊಂದಿಗೆ ತಾ. 9-9-2021ನೇ ಗುರುವಾರ ಉಡುಪಿ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ** ಅಪಾರ ಕೀರ್ತಿ ಗಳಿಸಿ **



**ಕುಮಾರಿ ವಸುಪ್ರದ,** ಎಮ್.ಟೆಕ್. ಕಂಪ್ಯೂಟರ್ ಸೈನ್ಸ್‌ನಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ. ಈಕೆ ಬೆಂಗಳೂರು ಆರ್.ವಿ. ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು, ಶ್ರೀಮತಿ ವತ್ಸಲಾ ಜಿ. ಉದ್ಯಾವರ ಮತ್ತು ಶ್ರೀ ಸುರೇಶ್ ರಾವ್‌ರವರ ಸುಪುತ್ರಿ.



**ಶ್ರೀಮತಿ ಭವ್ಯ ಎಂ. ಆರ್.,** ಎಮ್. ಟೆಕ್ ಕಂಪ್ಯೂಟರ್ ಸೈನ್ಸ್‌ನಲ್ಲಿ ದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ. ಈಕೆ ಬೆಂಗಳೂರು ಆರ್.ವಿ. ಕಾಲೇಜಿನ ವಿದ್ಯಾರ್ಥಿನಿ ಹಾಗೂ ಮಣಿಕ್ಕಳ ಸಂದೇಶ್ ರಾವ್‌ರವರ ಪತ್ನಿ. ಮದೆನಾಡು ಶ್ರೀ ರಾಮ ರಾವ್ ಮತ್ತು ಶ್ರೀಮತಿ ಗಾಯತ್ರಿ ಇವರ ಸುಪುತ್ರಿ.



ದೇರಳಕಟ್ಟೆ ಕೆ.ಎಸ್. ಹೆಗ್ಡೆ ಕಾಲೇಜಿನ ಪ್ರೊಫೆಸರ್ **ಡಾ| ಅಶ್ವಿನಿ,** ನಿಟ್ಟೆ ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪದವಿ ಪಡೆದಿದ್ದಾರೆ. ಇವರು ಡಾ| ಹೆಚ್. ಎಲ್. ಕಿಶನ್‌ಪ್ರಸಾದ ಎಂ.ಡಿ, ಕೆ.ಎಸ್. ಹೆಗ್ಡೆ ಕಾಲೇಜು, ದೇರಳಕಟ್ಟೆ ಇವರ ಪತ್ನಿ.



**ಕುಮಾರಿ ಅಕ್ಷರ ಅರವಿಂದ** ಈ ಬಾರಿಯ ಜೆ.ಇ.ಇ. ಮೈನ್ಸ್ (J.E.E. Mains) ಪರೀಕ್ಷೆಯಲ್ಲಿ ಶೇಕಡ 99.3 ಅಂಕಗಳಿಸಿ ಎನ್.ಐ.ಟಿ. ವಾರಂಗಲ್ (N.I.T. Warrangal)ಗೆ ಆಯ್ಕೆ ಆಗಿದ್ದಾಳೆ. ಅಕ್ಷರ ಇತ್ತೀಚಿಗೆ ನಡೆದ ಕಾಮೆಡ್‌ಕೆ ಪರೀಕ್ಷೆಯಲ್ಲಿ ಶೇಕಡಾ 99.5 ಅಂಕಗಳಿಸಿ 240ನೇ ರ್‍ಯಾಂಕ್ ಪಡೆದಿದ್ದಾಳೆ. ಇವಳು ಬೆಂಗಳೂರಿನ ಶ್ರೀ ಅರವಿಂದ ಹಾಗೂ ಶ್ರೀಮತಿ ಅಶ್ವಿನಿ ಇವರ ಸುಪುತ್ರಿ.



ಮಂಗಳೂರಿನ ಸ್ಮಾರ್ಟ್ ಸಿಟಿ ಲಿ. ಸಂಸ್ಥೆಯವರು ಏರ್ಪಡಿಸಿದ ಆಜಾದಿ ಕಾ ಅಮೃತ್ ಮಹೋತ್ಸವ ಡ್ರಾಯಿಂಗ್ ಸ್ಪರ್ಧೆಯಲ್ಲಿ 8ನೇ ತರಗತಿಯ **ಕು| ಅದಿತಿ ರಾವ್** ಇವರು ತೃತೀಯ ಸ್ಥಾನ ಗಳಿಸಿದ್ದಾರೆ. ಇವರು ಮಂಗಳೂರು ಕದ್ರಿಯ ಶ್ರೀ ಯು. ಎಸ್. ವಿವೇಕ್ ರಾವ್ ಮತ್ತು ಶ್ರೀಮತಿ ಕಲಾನಿಧಿ ಇವರ ಸುಪುತ್ರಿಯಾಗಿದ್ದಾರೆ.



**ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ**
**ಅರ್ಚಕ ಪರಿಪಾಲನಾ ಸಭಾ, ಮಂಗಳೂರು**
ಇದರ

## ಪ್ರಥಮ ವಾರ್ಷಿಕೋತ್ಸವ

**ದಿನಾಂಕ : 23-10-2021ನೇ ಶನಿವಾರ ಪೂರ್ವಾಹ್ನ**
**ಸ್ಥಳ : ಶ್ರೀ ಶಾರದಾ ಮಂಟಪ, ಉಡುಪಿ**

**ಕಾರ್ಯಕ್ರಮ**

ಪ್ರಾತಃಕಾಲ 7-00
**ತ್ರಿನಾರಿಕೇಳ ಮಹಾಗಣಪತಿ ಹೋಮ, ಅಯುತಗಾಯತ್ರೀ ಹವನ**
ಪೂರ್ವಾಹ್ನ ಗಂಟೆ 11-00
**ಸಭಾ ಕಾರ್ಯಕ್ರಮ ಆರಂಭ**

**ತಮ್ಮನ್ನು ಆದರದಿಂದ ಆಮಂತ್ರಿಸುವ**

**ಶ್ರೀ ಕೆ. ಗುರುಪ್ರಸಾದ ಹೆಬ್ಬಾರ್**, ಅಧ್ಯಕ್ಷರು
**ಶ್ರೀ ಪಿ. ಭವಾನೀಶಂಕರ ಉಪಾಧ್ಯಾಯ**, ಗೌರವಾಧ್ಯಕ್ಷರು
**ಶ್ರೀ ಜಗದಾಭಿರಾಮಸ್ವಾಮಿ,** ಉಪಾಧ್ಯಕ್ಷರು
**ಶ್ರೀ ಚಿದಾನಂದ ಶ್ಯಾನುಭೋಗ್**, ಕಾರ್ಯದರ್ಶಿ
**ಶ್ರೀ ಕೃಷ್ಣರಾಜ ಭಟ್**, ಜತೆ ಕಾರ್ಯದರ್ಶಿ
**ಶ್ರೀ ಪ್ರತಾಪ ರಾವ್**, ಕೋಶಾಧಿಕಾರಿ
**ಶ್ರೀ ಪ್ರಶಾಂತ ಶರ್ಮಾ**, ಪ್ರಧಾನ ಸಂಚಾಲಕರು
**ಪ್ರದೇಶ ಸಂಚಾಲಕರು** ಮತ್ತು **ಸರ್ವ ಸದಸ್ಯರು**


*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
"Vijaya Nivas", Opp. Pio Mall
Bejai Church Road, Mangalore - 4









**ರಾಮಾ ಆಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ





*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*





ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**

# ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ.), ಮೂಡಬಿದ್ರೆ ಇದರ ವಾರ್ಷಿಕ ಮಹಾಸಭೆ

ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ.), ಮೂಡಬಿದ್ರೆ ಇದರ 33ನೇ ವಾರ್ಷಿಕ ಮಹಾಸಭೆ, ಧಾರ್ಮಿಕ ಕಾರ್ಯಕ್ರಮ, ಸಮ್ಮಾನ, ಸೌಹಾರ್ದಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳು ಸಪ್ಟೆಂಬರ್ ತಿಂಗಳ ದಿನಾಂಕ 12ರ ಆದಿತ್ಯವಾರ ಮೂಡಬಿದ್ರೆ ಅಲಂಗಾರ್ ಶ್ರೀ ಜಯರಾಮ ರಾವ್ ಅವರ ಮನೆ 'ಅನುಗ್ರಹ'ದಲ್ಲಿ ಪರಿಷತ್ತು ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರೂ ಆದ ಗೌರವಾನ್ವಿತ ಶ್ರೀ ಎಂ. ದೇವಾನಂದ ಭಟ್ ಬೆಳ್ವಾಯಿ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಬೆಳಗ್ಗೆ ಗಂಟೆ 8-00ರಿಂದ ಪಾವಂಜೆ ಶ್ರೀ ದೇವರಾಜ್ ಹೆಬ್ಬಾರ್ ಅವರ ಪೌರೋಹಿತ್ಯದಲ್ಲಿ 'ಶ್ರೀಸತ್ಯ ವಿನಾಯಕ ಪೂಜೆ', ಶ್ರೀ ಆದಿಶಂಕರ ಭಜನಾ ಮಂಡಳಿಯ ಮಾತೆಯರಿಂದ ಭಜನಾ ಕಾರ್ಯಕ್ರಮ, ಮಂಗಳಾರತಿ, ಪ್ರಸಾದವಿತರಣೆ ಹೀಗೆ ಮುಂದುವರಿದು ಗಂಟೆ 11-30ಕ್ಕೆ ಸರಿಯಾಗಿ 'ಕೀರ್ತಿಶೇಷ ಬಿ. ನಾರಾಯಣ ರಾವ್ ಮತ್ತು ವಿಮಲ ಎನ್. ರಾವ್ ವೇದಿಕೆ'ಯಲ್ಲಿ ಮಹಾಸಭೆ ಆರಂಭಗೊಂಡು ನಮ್ಮ ಸಮಾಜದ ಹಿರಿಯ ಮುಂದಾಳು ಮಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ನಿವೃತ್ತ ಅಧಿಕಾರಿ ಎಂ. ಆರ್. ವಾಸುದೇವ ದೀಪಪ್ರಜ್ವಲನೆಯ ಮೂಲಕ ಉದ್ಘಾಟಿಸಿ ನಮ್ಮ ನಾಡು, ನುಡಿ, ಸಂಸ್ಕೃತಿ, ಮೂಲ ಸಂಸ್ಕೃತ ಭಾಷೆ ಬಗ್ಗೆ ಮುಖ್ಯವಾಗಿ ಆಧುನಿಕ ಯುಗದಲ್ಲಿ ಬ್ರಾಹ್ಮಣ್ಯವನ್ನು ಕಾಪಿಟ್ಟುಕೊಂಡು ಬರುವ ಜಾಗ್ರತಿಯ ಬಗ್ಗೆ ಮನಮುಟ್ಟುವಂತೆ ವಿವರಿಸಿದರು. ಅಭ್ಯಾಗತರಾದ ಬಂಟ್ವಾಳ ಸಂಘದ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂತೋಷ್ ಕಾವಳಕಟ್ಟೆ ಅವರು ಭಾಗವಹಿಸಿ ನಾವೆಲ್ಲರೂ ಒಂದಾಗಿ ಬೆರೆತು ಸಹಬಾಳ್ವೆಯಿಂದ ಮುನ್ನಡೆದು ಸಮಾಜ ಕಟ್ಟಲು ಪ್ರಯತ್ನ ಪಟ್ಟರೆ ಮಾತ್ರ ನಮಗೆ ಸ್ಥಾನಮಾನ ದೊರೆಯುತ್ತದೆ. ಆ ನೆಲೆಯಲ್ಲಿ ನಮ್ಮವರು ಶ್ರಮಿಸುತ್ತಿರುವುದು ಶ್ಲಾಘನೀಯ ಎಂದು ಶುಭ ನುಡಿದರು.

ಸಮಾಜದ ಹಿರಿಯ ನಾಗರಿಕರ ನೆಲೆಯಲ್ಲಿ ಕಟೀಲು ಶ್ರೀ ಭವಾನಿಶಂಕರ್ ರಾವ್ ದಂಪತಿಗಳನ್ನು ಸಮ್ಮಾನಿಸಲಾಯಿತು. 2020-21ನೇ ಸಾಲಿನಲ್ಲಿ 10ನೇ ತರಗತಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳನ್ನು ನಗದು ನೀಡಿ ಗೌರವಿಸಲಾಯಿತು.



ಜೊತೆಗೆ ಪ್ರಸ್ತುತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600 / 600 ಅಂಕ ಗಳಿಸಿದ ಪುತ್ತಿಗೆ ಶ್ರೀನಿವಾಸ ರಾವ್ ದಂಪತಿಗಳ ಸುಪುತ್ರಿ ಕುಮಾರಿ ಭೂಮಿಕಾಳನ್ನು ವಿಶೇಷವಾಗಿ ಸಮ್ಮಾನಿಸಲಾಯಿತು. ಪರಿಷತ್ತಿನ ಗೌರವಾಧ್ಯಕ್ಷರಾದ ಶ್ರೀ ಸುರೇಶ್ ರಾವ್ ಲಾಡಿ, ಹಿರಿಯ ಮಾರ್ಗದರ್ಶಕರು ಶ್ರೀ ರಾಯಿ ರಾಜಕುಮಾರ್ ರಾವ್ ಉಪಸ್ಥಿತರಿದ್ದ ಸಭೆಯಲ್ಲಿ ಬೊಕ್ಕಸ ಚಂದ್ರಶೇಖರ್ ರಾವ್ ಅಭ್ಯಾಗತರನ್ನು ಸ್ವಾಗತಿಸಿದರೆ, ವಾರ್ಷಿಕ ಲೆಕ್ಕಪತ್ರಗಳನ್ನು ಪರಿಷತ್ತು ಕೋಶಾಧಿಕಾರಿಗಳಾದ ಶ್ರೀ ವಸಂತ ರಾಜ್ ಬಿ. ಕೆ. ಮಂಡಿಸಿ ಮಂಜೂರಾತಿಗೊಳಿಸಿದರು.

ಸಮಾಜದಲ್ಲಿ ಸಂದುಹೋದ ಹಿರಿಯ ಚೇತನಗಳಿಗೆ ಮೌನ ಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿಯನ್ನು ಬೊಕ್ಕಸ ಶ್ರೀ ಜಯರಾಮ್ ರಾವ್ ನೆರವೇರಿಸಿದರು. ಕಟೀಲು ಶ್ರೀ ಮಂಜುನಾಥ್ ರಾವ್ ಕಾರ್ಯಕ್ರಮದ ನಿರೂಪಣೆಯಲ್ಲಿ ಸಹಕರಿಸಿದರೆ ಪ್ರಧಾನ ಕಾರ್ಯದರ್ಶಿ ಶ್ರೀ ಸುರೇಶ್ ರಾವ್ ಬಿ. ಧನ್ಯವಾದವಿತ್ತರು.

ಸಮಾಜ ಬಾಂಧವರು ಮನೆಯಲ್ಲಿ ತಾವೇ ತಯಾರಿಸಿದ ಸಾಮಾನ್ಯ 40 ಬಗೆಯ ತಿಂಡಿ ತಿನಸುಗಳು ಎಲ್ಲರ ಮನಗೆದ್ದಿತ್ತು. ಊಟದ ಬಳಿಕ ಕಾರ್ಕಳ ಶ್ರೀ ಅನಂತಪದ್ಮನಾಭ ಭಟ್ ಇವರಿಂದ ಹರಿಕಥಾಕಾಲಕ್ಷೇಪ 'ಭಕ್ತ ಸುದಾಮ' ಸಂಪನ್ನಗೊಂಡಿತು.

*ವರದಿ : ಸುರೇಶ್ ರಾವ್ ಬೊಕ್ಕಸ*

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

PREETHIKA AUTOMOBILES
2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Cells

Prop. : *Kishore Kumar Kedige*
Ph. : 2231524
M. : 9880726325
KYADIGE AUTOMOBILES
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

Muralidhara Rao Adyapadi
Proprietor
Mob : 94480 27259
99803 16434
SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

PRAMOD
AUTOMOBILES
KARANGALPADY
MANGALORE- 575 003
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR




ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
G. K. KOLPE
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

# ದೀಪಾವಳಿ ಆಚರಣೆ

ಸನಾತನ ಧರ್ಮಾನುಷ್ಠಾನದಲ್ಲಿ ಹಬ್ಬ ಹರಿದಿನಗಳ ಆಚರಣೆಯು ಪ್ರಮುಖವಾಗಿ ಒಂದು ಭಾಗ, ಗ್ರಾಮೀಣ ಜಾತ್ರೆಗಳು, ರಥೋತ್ಸವಗಳು, ಸಂಕ್ರಾಂತಿ, ಶಿವರಾತ್ರಿ, ಚಾಂದ್ರಮಾನಯುಗಾದಿ, ಶ್ರೀರಾಮನವಮಿ, ಸ್ವರ್ಣಗೌರೀ ವ್ರತ, ಗಣೇಶ ಚತುರ್ಥಿ ಹಾಗೂ ಶರನ್ನವರಾತ್ರಿ ಸಂಭ್ರಮ ಮತ್ತು ಸಡಗರದ ಆಚರಣೆ. ಅನಂತರವೇ ನರಕಚತುರ್ದಶಿ ಹಾಗೂ ಬಲಿಪಾಡ್ಯಮಿ ಹಬ್ಬದ ಆಚರಣೆ. ಮಕ್ಕಳಿಗೆ ಸಿಡಿಮದ್ದು ಸದ್ದಿನ ಸಡಗರದ ಮೂರು ದಿನಗಳೂ, ಆಶ್ವಯುಜ ಮಾಸದಲ್ಲಿನ ಈ ಆಚರಣೆ ಕುಟುಂಬದ ಎಲ್ಲರೂ ಆಚರಿಸಿ, ಸಂತೋಷ ಪಡುವ ಒಂದು ಸಂಭ್ರಮದ ಹಬ್ಬ. ಆಶ್ವಯುಜ ಕೃಷ್ಣ ಚತುರ್ದಶೀ ದಿನ ಶ್ರೀಕೃಷ್ಣನು ನರಕಾಸುರನನ್ನು ಸಂಹಾರ ಮಾಡಿದ ಎಂಬುದು ಪ್ರತೀತಿ, ಭೂದೇವಿಯ ಪುತ್ರನಾದ ಅಸುರನು ಶ್ರೀ ಮಹಾವಿಷ್ಣುವು ವರಾಹಾವತಾರವನ್ನು ಧರಿಸಿದಾಗ ಆತನ ಮೈಬೆವರು ಭೂಮಿಯ ಮೇಲೆ ಬಿದ್ದು ಈತನು ಮಗನಾಗಿ ಹುಟ್ಟಿದನು. ಇದರಿಂದಾಗಿ ಈತನಿಗೆ ಭೌಮಾಸುರನೆಂದೂ ಸಹ ಕರೆಯುತ್ತಾರೆ. ಭೂದೇವಿಯು ವರಾಹಸ್ವಾಮಿಯನ್ನು ಪ್ರಾರ್ಥಿಸಲು ಆತನು ತನ್ನದಾಡೆಯನ್ನು ಆಕೆಯ ಕೈಗಿತ್ತು ಇದು ಅಮೋಘವಾದ ವೈಷ್ಣವಾಸ್ತ್ರ ಎಂದಿದ್ದನು. ಭೂದೇವಿಯು ಆ ಅಸ್ತ್ರವನ್ನು ತನ್ನ ಮಗನ ಕೈಗಿತ್ತಳು.

ಮುಂದೆ ನರಕನು ಪ್ರಾಗ್ಜ್ಯೋತಿಷ ನಗರದಲ್ಲಿ ರಾಜ್ಯಭಾರ ಮಾಡುತ್ತಾ ಮಾನವರಿಗೆ ಮತ್ತು ದೇವತೆಗಳಿಗೆ ಪೀಡೆಯನ್ನು ನೀಡುತ್ತಾ ಲೋಕ ಕಂಟಕನಾಗಿದ್ದನು. ಇವನು ಅದಿತಿದೇವಿಯ ಕಿವಿಯ ರತ್ನಕುಂಡಲಗಳನ್ನು, ವರುಣನ ಶ್ವೇತಚ್ಛತ್ರವನ್ನು, ಮೇರು ಪರ್ವತ ಭಾಗವಾದ ಮಹಾಮಣಿ ಎಂಬ ಶಿಖರವನ್ನು, ವೈಜಯಂತಿ ಮಾಲೆಯನ್ನು ಅಪಹರಿಸಿದನು. ಮುಂದೆ ದೇವೇಂದ್ರನು ನರಕನ ದುಶ್ಚೇಷ್ಟೆಗಳನ್ನು ಸಹಿಸಲಾಗದೆ ಶ್ರೀಕೃಷ್ಣನಿಗೆ ದೂರಲು, ಆತನು ಭೂದೇವಿಯ ಅಂಶಭೂತೆಯಾದ ಸತ್ಯಭಾಮೆಯನ್ನು ತನ್ನೊಡನೆ ಕರೆದುಕೊಂಡು ಗರುಡಾರೂಢನಾಗಿ ಪ್ರಾಗ್ಜ್ಯೋತಿಷಪುರಕ್ಕೆ ಬಂದನು. ಅಲ್ಲಿ ಪುರವನ್ನು ರಕ್ಷಿಸುತ್ತಿರುವ ಗಿರಿದುರ್ಗ, ಜಲದುರ್ಗ, ಅಗ್ನಿದುರ್ಗ, ಶಸ್ತ್ರದುರ್ಗ ಮತ್ತು ವಾಯುದುರ್ಗಗಳೆಂದು ಐದು ಬಗೆಯ ದುರ್ಗಗಳನ್ನು ಭೇದಿಸಿದನು. ಅಲ್ಲಿ ಹಯಗ್ರೀವ, ನಿಕುಂಬ, ಪಂಚಜನ ಮತ್ತು ಮುರಾಸುರನೆಂಬ ನಾಲ್ಕು ಜನ ರಾಕ್ಷಸರು ನರಕನ ರಾಜ್ಯದ ನಾಲ್ಕು ಎಲ್ಲೆಗಳನ್ನು ಕಾಯುತ್ತಿದ್ದರು. ಮುರಾಸುರನಿಂದ ನಿರ್ಮಿತವಾದ ಸಾವಿರಾರು ಪಾಶಗಳನ್ನು ತನ್ನ ಖಡ್ಗದಿಂದ ಕತ್ತರಿಸಿದನು. ಈ ಪಾಶಗಳು ನಗರದ ಸಮೀಪಕ್ಕೆ ಬಂದ ಶತ್ರುಗಳ ಮೈಗೆ ಬಲವಾಗಿ ಸುತ್ತಿಕೊಂಡು ಅವರನು ಕೆಡವಿ ಕೊಲ್ಲುತ್ತಿದ್ದವು. ಅವನ ಶಂಖ ಧ್ವನಿಯನ್ನು ಕೇಳಿ ಜಲಶಯ್ಯೆಯಲ್ಲಿ ಮಲಗಿದ್ದ ಐದು ತಲೆಯುಳ್ಳ ಮುರಾಸುರನು ಎದ್ದು ಕೃಷ್ಣನನ್ನು ಎದುರಿಸಿ ಆತನ ಚಕ್ರಾಯುಧದಿಂದ ಹತನಾದನು. ಚತುರ್ದಶಿಯಂದು ನರಕಾಸುರನನ್ನು ವಧಿಸಿ ಅವನ ರಕ್ತವನ್ನು ತನ್ನ ಹಣೆಗೆ ಹಚ್ಚಿಕೊಂಡು ಮನೆಗೆ ಮರಳಿದ ಶ್ರೀಕೃಷ್ಣನಿಗೆ ನಂದನು ಅಭ್ಯಂಗಸ್ನಾನ ಮಾಡಿಸಿದನು. ಸ್ತ್ರೀಯರೆಲ್ಲರೂ ದೀಪಗಳ ಆರತಿಯನ್ನು ಬೆಳಗಿ ಆನಂದವನ್ನು ವ್ಯಕ್ತಪಡಿಸಿದರು. ಅಂದಿನಿಂದ ಆಶ್ವಯುಜ ಕೃಷ್ಣ ಚತುರ್ದಶೀಯು ನರಕ ಚತುರ್ದಶೀ ಎಂದು ಆಚರಿಸಲ್ಪಡುತ್ತಿದೆ. ಧರ್ಮಾಸಕ್ತರು ಈ ದಿನದಂದು ಸೂರ್ಯೋದಯವಾಗುವುದಕ್ಕಿಂತ ಮುಂಚೆ ಅಭ್ಯಂಗಸ್ನಾನ ಮಾಡುವುದು ಪ್ರತೀತಿ ಅಭ್ಯಂಗಸ್ನಾನದ ನಂತರ ಹಣೆಗೆ ಹಚ್ಚಿಕೊಳ್ಳುವ ತಿಲಕವು ದುಷ್ಟ ಸಂಹಾರ ಮತ್ತು ಧರ್ಮದ ವಿಜಯದ ಸಂಕೇತವಾಗಿದೆ. ಹಾಗೂ ಕಾಲಾನುಕ್ರಮವಾಗಿ ಚತುರ್ದಶಿಯಂದು ದೀಪಗಳನ್ನು ಬೆಳಗುವುದು ಸಂಪ್ರದಾಯವಾಗಿ ಇಂದಿಗೆ ದೀಪಾವಳಿಯಾಗಿದೆ.

ಕಾರ್ತಿಕ ಮಾಸ ಶುಕ್ಲ ಪಕ್ಷ ಪಾಡ್ಯ ಮೊದಲ ದಿವಸ ಬಲಿಪಾಡ್ಯಮಿ ಎಂದು ಆಚರಿಸಲಾಗುತ್ತಿದೆ. ಬಲಿಯು ಒಬ್ಬ ಅಸುರ ಚಕ್ರವರ್ತಿ, ವಿರೋಚನನ ಮಗನಾಗಿ ಜನ್ಮ ತಾಳುತ್ತಾನೆ. ಮುಂದೆ ಬಲಿ ರಾಜನಾಗಿ ಆಡಳಿತವನ್ನು ನಡೆಸುತ್ತಾನೆ. ಪ್ರಹ್ಲಾದನು ಬಲಿಯ ಅಜ್ಜ, ಬಲಿಗೆ ಬಾಣಾಸುರ ಹಾಗೂ ಧೃತರಾಷ್ಟ್ರರೆಂಬ ಇಬ್ಬರು ಮಕ್ಕಳು ಸುದೇಷ್ಣೆ ಬಲಿರಾಜನ ಪತ್ನಿ. ಈತನಿಗೆ ಮಹಾಬಲಿ ಹಾಗೂ ಇಂದ್ರಸೇನನೆಂಬ ಹೆಸರೂ ಇದೆ.

ಒಮ್ಮೆ ರಾವಣನು ದಿಗ್ವಿಜಯಕ್ಕಾಗಿ ಪಾತಾಳ ಲೋಕವನ್ನು ಸೇರಿ ಬಲಿ ಚಕ್ರವರ್ತಿಯ ಅರಮನೆಗೆ ಹೋದನು. ಅಲ್ಲಿ ಬಾಗಿಲಲ್ಲಿ ನಿಂತಿದ್ದ ವಾಮನಾವತಾರಿಯೊಡನೆ ಈ ಲೋಕಕ್ಕೆ ರಾಜನಾರೆಂದು ಕೇಳಲು ಅವನು ಉತ್ತರವನ್ನು ಕೊಡದಿದುದರಿಂದ ಅರಮನೆಯೊಳಗೆ ಪ್ರವೇಶಿಸಿದನು. ಆಗ ಬಲಿ ಚಕ್ರವರ್ತಿಯು ಸ್ತ್ರೀಯರೊಡನೆ ದ್ಯೂತವಾಡುತ್ತಿದ್ದನು. ರಾವಣನು ಅವನ ಸಮೀಪದಲ್ಲಿ ನಿಂತು ಬಲಿಯ ವೈಭೋಗಗಳನ್ನೆಲ್ಲಾ ನೋಡುತ್ತಿದ್ದನು. ಆಗ ಬಲಿ ಚಕ್ರವರ್ತಿಯ ಕೈಯಲ್ಲಿನ ದಾಳವು ದೂರ ಸಿಡಿಯಲು ಬಲಿಯು ಅದನ್ನು ತರುವಂತೆ ರಾವಣನಿಗೆ ಆಜ್ಞೆ ಮಾಡಿದನು. ರಾವಣನಿಗೆ ತನ್ನ ಇಪ್ಪತ್ತು ತೋಳುಗಳಿಂದಲೂ ಆ ದಾಳವನ್ನು ಎತ್ತಲಾಗಲಿಲ್ಲ. ಅದು ಆತನ ಬೆರಳ ಮೇಲೆ ಬೀಳಲು ರಾವಣನು ಆ ವೇದನೆಯನ್ನು ಸಹಿಸಲಾಗದೆ ರೋಧಿಸತೊಡಗಿದನು. ಬಲಿ ಚಕ್ರವರ್ತಿಯ ದಾಸಿಯು ಬಂದು ರಾವಣನ ಬೆರಳುಗಳ ಮೇಲಿನಿಂದ ದಾಳವನ್ನು ತೆಗೆದಳು.

ಒಮ್ಮೆ ಪ್ರಹ್ಲಾದ ಮುಂದೆ ಬಲಿಯು ಶ್ರೀ ಮಹಾವಿಷ್ಣುವನ್ನು ನಿಂದಿಸಿದುದರಿಂದ ಕೋಪಗೊಂಡ ಪ್ರಹ್ಲಾದನು ನೀನು ರಾಜಭ್ರಷ್ಟನಾಗಿ ಅಧಃಪತನವನ್ನು ಹೊಂದು ಎಂದು ಶಾಪವಿತ್ತನು. ಮೊದಲೊಮ್ಮೆ ಬಲಿಯು ಇಂದ್ರನಿಂದ ಹತನಾಗಿ ಶುಕ್ರಾಚಾರ್ಯರ ಮೃತ ಸಂಜೀವಿನಿ ವಿದ್ಯೆಯ ಪ್ರಭಾವದಿಂದ ಪುನಃ ಬದುಕಿ ಬಳಿಕ ವಿಶ್ವಜಿತ್ತೆಂಬ ಯಾಗವನ್ನು ಮಾಡಿ ಅಗ್ನಿದೇವನಿಂದ ಕುದುರೆ, ರಥ, ಧ್ವಜಗಳನ್ನು ಹಾಗೂ ಪ್ರಹ್ಲಾದನಿಂದ ದಿವ್ಯ ಧನುಸ್ಸನ್ನು, ಅಕ್ಷಯ ಬತ್ತಳಿಕೆಯನ್ನೂ ಪಡೆದು, ಯುದ್ಧದಲ್ಲಿ ಇಂದ್ರನನ್ನು ಗೆದ್ದು ಇಂದ್ರ ಲೋಕವನ್ನು ವಶಪಡಿಸಿಕೊಂಡನು. ಈತನ ರಾಜ್ಯಭಾರವು ಸುಪ್ರಸಿದ್ಧವಾಗಿತ್ತು. ಸಪ್ತ ಚಿರಂಜೀವಿಗಳಲ್ಲಿ ಈತನೊಬ್ಬನೂ ಎಂಬುದೇ ಈತನ ಬಲವಾದ ಅಸ್ತ್ರ. ಒಮ್ಮೆ ಆಕಾಶದಿಂದ ಒಂದು ಕಿರೀಟವು ಶ್ರೀಕೃಷ್ಣನ ತಲೆಯ ಮೇಲೆ ಬಂದು ಶೋಭಿಸಿತು. ಶ್ರೀಕೃಷ್ಣನು ಯೋಗ ನಿದ್ರೆಯಲ್ಲಿದ್ದಾಗ ಬಲಿ ಚಕ್ರವರ್ತಿಯು ಈತನ ಕಿರೀಟವನ್ನು ಅಪಹರಿಸಿ ಪಾತಾಳಕ್ಕೆ ಹೊರಟು ಹೋದನು ಇದನ್ನು ತಿಳಿದ ಗರುಡನು ಬಲಿಯೊಡನೆ ಯುದ್ಧ ಮಾಡಿಗೆದ್ದು ಆ ಕಿರೀಟವನ್ನು ಶ್ರೀಕೃಷ್ಣನ ಶಿರದ ಮೇಲೆ ತಂದಿಟ್ಟನು.

ಬಲಿಯು ನರ್ಮದೆಯ ಉತ್ತರತಟದಲ್ಲಿರುವ ಭೃಗುಕುಚ್ಛದಲ್ಲಿ ಅಶ್ವಮೇಧಯಾಗವನ್ನು ಮಾಡಿದನು. ಈ ಸಂದರ್ಭದಲ್ಲಿ ಶ್ರೀ ಮಹಾವಿಷ್ಣುವು ಬಲಿಯ ನಿಗ್ರಹಕ್ಕಾಗಿ ಅದಿತಿಯ ಗರ್ಭದಲ್ಲಿ ವಾಮನ ರೂಪದಿಂದ ಇಂದ್ರನಿಗೆ ತಮ್ಮನಾಗಿ ಉಪೇಂದ್ರನಾಗಿ ಅವತರಿಸಿ ಬಲಿಯ ಯಾಗಶಾಲೆಗೆ ಬ್ರಹ್ಮಚಾರಿಯ ವೇಷದಲ್ಲಿ ಬಂದು ಮೂರಡಿ ಭೂಮಿಯನ್ನು ಯಾಚಿಸಿದನು. ಬಲಿ ಚಕ್ರವರ್ತಿಯು ಪರಮ ಸಂತೋಷದಿಂದ ಮೂರಡಿ ಭೂಮಿಯನ್ನು ದಾನ ಮಾಡಿ ನೀರಿನ ಧಾರೆಯೆರೆಯಲು ವಾಮನ ಮೂರ್ತಿಯ ರೂಪವು ಬೃಹದಾಕಾರವಾಗಿ ಬೆಳೆದು ಜಗತ್ತೆಲ್ಲವನ್ನೂ ವ್ಯಾಪಿಸಿತು. ಭೂಮಿ ಮತ್ತು ಆಕಾಶಗಳನ್ನು ಎರಡು ಅಡಿಗಳಿಂದ ಅಳೆದು ಮೂರನೇ ಅಡಿಯನ್ನು ಬಲಿಯ ತಲೆಯ ಮೇಲಿಟ್ಟು ಪಾತಾಳಕ್ಕೆ ತಳ್ಳಿ ಬಲಿಯನ್ನು ನಿಗ್ರಹಿಸಿ ದೇವರಾಜ್ಯವನ್ನು ಇಂದ್ರನಿಗೆ ವಹಿಸಿಕೊಟ್ಟನು. ಬಲಿಯನ್ನು ಪಾತಾಳಕ್ಕೆ ತಳ್ಳುವಾಗ ಪರಮಾತ್ಮನು ವಿಧಿಹೀನವಾದ ದಾನ, ಶ್ರೋತ್ರಿಯನಿಲ್ಲದ ಶ್ರಾದ್ಧ, ಶ್ರದ್ಧೆಯಿಲ್ಲದ ಕರ್ಮ, ಆಜ್ಯವಿಲ್ಲದ ಹೋಮ, ದಕ್ಷಿಣೆಯಿಲ್ಲದ ಯಾಗ, ಉದಕವಿಲ್ಲದ ಪೂಜೆ ಇವುಗಳಿಂದ ಬರುವ ಪುಣ್ಯವು ಆಯಾ ಕರ್ಮಗಳನ್ನು ಮಾಡಿದವರಿಗೆ ಸೇರದೇ ಅವೆಲ್ಲವೂ ನಿನಗೆ ಸಲ್ಲುವುವು ಎಂದು ವರವಿತ್ತನು. ಪ್ರತಿ ಕಾರ್ತಿಕ ಮಾಸ ಶುಕ್ಲ ಪಕ್ಷದ ಪಾಡ್ಯಮಿಯ ಭೂಲೋಕದ ಜನರು ಬಲಿಚಕ್ರವರ್ತಿಯು ಬಂದನೆಂದು ಸಂತೋಷದಿಂದ ನಿನ್ನನ್ನು ಪೂಜಿಸಿ ಬಾಣ ಬಿರುಸುಗಳನ್ನು ಬಿಟ್ಟು, ಮದ್ದು ಗುಂಡುಗಳನ್ನು ಸಿಡಿಸಿ, ದೀಪಗಳನ್ನು ಹಚ್ಚಿ ಸಂತೋಷ ಪಡುವಂತಾಗಲಿ, ಇಂದಿನಿಂದ ಈ ಹಬ್ಬಕ್ಕೆ ಬಲಿ ಪಾಡ್ಯಮಿ ಎಂದು ಹೆಸರಾಗಲಿ, ನೀನು ಭೂಲೋಕಕ್ಕೆ ಬರುವ ಸಮಯದಲ್ಲಿ ನಾನು ಸೇನಾ ಸಹಿತನಾಗಿ ಪಾತಾಳದಲ್ಲಿನ ನಿನ್ನ ರಾಜ್ಯವನ್ನು ಕಾಯುತ್ತೇನೆ ಎಂದು ವರವಿತ್ತನು ಹಾಗೂ ದೀಪಗಳನ್ನು ಹಚ್ಚಿ ಸಂಭ್ರಮಿಸುವುದರಿಂದ ದೀಪಾವಳಿ ಎಂದು ಪ್ರತೀತಿಗೆ ಬಂದಿತು. ಬಲಿ ಚಕ್ರವರ್ತಿಗೆ ಒಂದುಕಲ್ಪ ಪ್ರಮಾಣದ ಆಯುಷ್ಯವನ್ನು ಮುಂದಿನ ಸಾವರ್ಣಿಕ ಮನ್ವಂತರದಲ್ಲಿ ಇಂದ್ರ ಪದವಿಯನ್ನೂ, ಅಲ್ಲಿಯವರೆಗೂ ಸುತ್ತಲಲೋಕದಲ್ಲಿ ಸಕಲ ಭೋಗಗಳನ್ನು ಅನುಭವಿಸುವಂತೆ ಅನುಗ್ರಹಿಸಿ ದಾರಿತಪ್ಪಿ ನಡೆದರೆ ನಿನ್ನನ್ನು ವರುಣಪಾಶಗಳು ಬಂಧಿಸುವುವು ಎಂದು ಎಚ್ಚರಿಕೆ ಕೊಟ್ಟು ಅದೃಶ್ಯನಾದನು.

*ಕೃಪೆ : "ಶ್ರೀ ಶಂಕರ ಕೃಪಾ"*


**PRAVEEN KUMAR ADYAPADY**
**NOTARY & ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes : Civil, Criminal, Motor Vehicles, A.C., D.C. Cases, Land Conversion, Registration etc.**

Phone : 0824 - 2440110, 2213946
**VISHRAM MOTORS (P.) LTD.**
**No. 4, Kodialbail Church Building**
**K. S. Rao Road, MANGALORE - 575 003**
*Authorised Dealers for :*
**Vijai Super GP 150 &**
**Vikram 3 Wheelers (Petrol & Diesel)**



ಕೆ. ಲಕ್ಷ್ಮೀನಾರಾಯಣ ಶರ್ಮ
: 9448043969
8861497325
**ಶಿವಗಿರಿ ಎಂಟರ್‌ಪ್ರೈಸಸ್**
**SHIVAGIRI ENTERPRISES**



ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

# * ಉತ್ಥಾನದ್ವಾದಶಿ ತುಳಸೀ ಆರಾಧನೆ *

'ಉತ್ಥಾನ' ಎಂದರೆ ಮೇಲಕ್ಕೇಳುವುದು, ಎದ್ದು ನಿಲ್ಲುವುದು, ಉದಯ, ಹುಟ್ಟು, ಮತ್ತು ಬದುಕುವುದು ಎಂಬ ವಿಭಿನ್ನ ಅರ್ಥಗಳಿವೆ. "ಉತ್ಥಾನ" ಪದಕ್ಕೆ ನಿದ್ರೆಯಿಂದ ಏಳು ಎಂಬ ಅರ್ಥವನ್ನು ಅನ್ವಯಿಸಬೇಕಾಗುತ್ತದೆ. ಈ ಅರ್ಥಕ್ಕೆ ಕಾರಣ ಎಂದರೆ ಭಗವಂತನು ಚಾತುರ್ಮಾಸ್ಯದ ನಾಲ್ಕು ತಿಂಗಳುಗಳಲ್ಲಿ ಶಯನಿಸಿದ್ದು, ಈ ಉತ್ಥಾನ ದ್ವಾದಶಿಯಂದು ನಿದ್ರೆಯಿಂದ ಎಚ್ಚರಗೊಳ್ಳುತ್ತಾನೆ. ಹೀಗೆಂದಾಗ, ಯಾವುದೀ ಚಾತುರ್ಮಾಸ್ಯ? ಇದರ ನಾಲ್ಕು ತಿಂಗಳುಗಳು ಯಾವುವು ? ಎಂಬುದು ಬಹಳಷ್ಟು ಆಸ್ತಿಕರಿಗೆ ತಿಳಿದಿರಲಾರದ ಕಾರಣ, ಚಾತುರ್ಮಾಸ್ಯದ ಬಗ್ಗೆ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ದಕ್ಷಿಣಾಯನ (ಸಾಧಾರಣವಾಗಿ ಜುಲೈ ತಿಂಗಳು)ದಲ್ಲಿನ ಮೊದಲ 4 ತಿಂಗಳು, ಅಂದರೆ, ಆಷಾಢ ಮಾಸದ ಶುಕ್ಲ ಪಕ್ಷದ ಪೌರ್ಣಮಿಯ ಕಾರ್ತಿಕ ಮಾಸದ ಶುಕ್ಲ ಪಕ್ಷದ ಪೌರ್ಣಮಿಯವರೆಗೆ ಚಾತುರ್ಮಾಸ್ಯ. ಈ ಚಾತುರ್ಮಾಸ್ಯಗಳು ಭಗವಂತನಿಗೆ ಪ್ರಿಯವಾಗಿದೆ. ಈ ನಾಲ್ಕು ಮಾಸಗಳಲ್ಲೂ ಅನುಕ್ರಮವಾಗಿ ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರ ಎಂಬ ಹೆಸರುಗಳಲ್ಲಿ ಭಗವಂತನು ಆರಾಧಿಸಲ್ಪಡುತ್ತಾನೆ. ಈ ನಾಲ್ಕು ತಿಂಗಳುಗಳ ಅವಧಿಯಲ್ಲಿ ಭಗವಂತನು ಯೋಗ ನಿದ್ರೆಯಲ್ಲಿರುತ್ತಾನೆ. ಕಾರ್ತಿಕ ಮಾಸದ (ನವಂಬರ್) ಶುಕ್ಲಪಕ್ಷದ ದ್ವಾದಶಿಯಂದು ನಿದ್ರೆಯಿಂದ ಎಚ್ಚರಗೊಳ್ಳುವುದಿದ್ದು ಈ ದಿನವನ್ನು 'ಉತ್ಥಾನದ್ವಾದಶಿ' ಎಂದು ಹೆಸರಿಸಲಾಗಿದೆ. ಈ ದಿನ ಆರಾಧ್ಯ ದೇವತೆ ತುಳಸೀ. ಅದೇ ದಿನ ಶ್ರೀ ಮಹಾವಿಷ್ಣುವಿನೊಂದಿಗೆ (ಶ್ರೀಕೃಷ್ಣ) ತುಳಸಿಯ ವಿವಾಹ ಜರುಗಿದ್ದು ಈ ದಿನವನ್ನು "ಕ್ಷೀರಾಬ್ಧಿದ್ವಾದಶಿ" ಎಂದೂ ಕರೆಯುವ ವಾಡಿಕೆಯಿದೆ, ಈ ದಿನ ಶ್ರೀ ಮಹಾವಿಷ್ಣುವು ಕ್ಷೀರಲೋಕ (ವೈಕುಂಠ)ದಿಂದ ಭೂಲೋಕಕ್ಕೆ ಪಯಣಿಸಿದ ದಿನವಾಗಿದೆ. ಇಂದು ತುಳಸೀ ಗಿಡ ಬೆಳೆದಿರುವ ತುಳಸೀಕಟ್ಟೆ, ವೃಂದಾವನವನ್ನು ಸುಣ್ಣ ಬಣ್ಣಗಳಿಂದ ಅಲಂಕರಿಸಿ, ಇದರ ಮುಂದೆ ಸುಂದರ ರಂಗವಲ್ಲಿಯನ್ನಿಡುವಿಕೆ, ಗಿಡದ ಪಕ್ಕದಲ್ಲೇ ನೆಲ್ಲಿಕಾಯಿ ಉಳ್ಳ ನೆಲ್ಲಿಗಿಡವನ್ನು ನೆಡುವಿಕೆ, ಇವಕ್ಕೆ ಸ್ತ್ರೀ ಮುಖವಾಡವಿಟ್ಟು, ಅದಕ್ಕೆ ಸೀರೆ ಉಡಿಸಿ, ಆಭರಣ ತೊಡಿಸಿ, ಮಂಗಳ ದ್ರವ್ಯಗಳಿಂದ ಅಲಂಕರಿಸುವಿಕೆ, (ಈ ಗಿಡಗಳ ಜೊತೆಯಲ್ಲೇ ಕೆಲವರು ಶ್ರೀ ಕೃಷ್ಣನ ಪಟವನ್ನೂ ಇಡುವ ಪದ್ಧತಿ ಇದೆ). ಈ ಗಿಡಗಳ ಮುಂದೆ ನೆಲ್ಲಿಕಾಯಿಗಳನ್ನು ಚಂದ್ರಾಕಾರದಲ್ಲಿ ಕೊರೆದು ಅದರಲ್ಲಿ ತುಪ್ಪದ ದೀಪಗಳನ್ನು ಹಚ್ಚಿಟ್ಟು ತುಳಸಿಯನ್ನು ಪೂಜಿಸುವಿಕೆ, ಈ ಸಂತಸ, ಸಂಭ್ರಮಗಳ ಕುರುಹಾಗಿ ಸಿಡಿಮದ್ದುಗಳನ್ನು ಸಿಡಿಸುವಿಕೆ ಉತ್ಥಾನದ್ವಾದಶಿಯ ಪೂಜೆಯ ಮುಖ್ಯ ಭಾಗವಾಗಿರುತ್ತದೆ.

ಈ ತುಳಸೀ, ವೃಂದಾವನೀ, ಎಲ್ಲ ಗಿಡಮರಗಳ ದೇವತೆ ವಿಶ್ವಪೂಜಿತೆ. ವಿಶ್ವವೆಲ್ಲರಿಂದ ಪೂಜಿತೆ. ಪುಷ್ಪಸಾರ ಎಲ್ಲ ಪುಷ್ಪಗಳ ಸಾರವೀಕೆ, ನಂದಿನೀ ಕೋರಿದ್ದನ್ನು ಕೊಡುವಾಕೆ. ಕೃಷ್ಣ ಜೀವನಿ, ಕೃಷ್ಣನ ಆತ್ಮ, ಜೀವವೀಕೆ–ವಿಶ್ವಪಾವನಿ–ವಿಶ್ವವನ್ನು ಪಾವನಗೊಳಿಸುವಾಕೆ ಎಂದೆಲ್ಲಾ ಈಕೆಯನ್ನು ಸ್ತುತಿಸಲಾಗಿದೆ.

ಈ ತುಳಸೀ ಪೂಜೆಯ ಸಮಯದಲ್ಲಿ "ಓಂ ಶ್ರೀ ತುಳಸ್ಯೈ ನಮಃ; ವಿಷ್ಣು ಪತ್ನ್ಯೈ ನಮಃ; ಲೋಕ ವಂದಿತಾಯ್ಯೆ ನಮಃ; ರಂಭೋರ್ವ ಪೀತಾಂಭರ ಧಾರಿಣ್ಯೇ ನಮಃ; ಕ್ಷೀರಾಬ್ಧಿ ತನಯ್ಯಾಯ್ಯೆ ನಮಃ ಇತ್ಯಾದಿ ಸ್ತೋತ್ರಗಳನ್ನು ಪಠಿಸುವುದು ರೂಢಿಯಲ್ಲಿದೆ. ಕಾರ್ತಿಕ ಮಾಸ ಎಲ್ಲೆಲ್ಲೂ ದೀಪಗಳನ್ನು ಬೆಳಗಿಸುವ ಸಮಯವಾಗಿದ್ದು, ಈ ಮಾಸದಲ್ಲಿ ಬರುವ ಉತ್ಥಾನ ದ್ವಾದಶಿಯಂದು ಸ್ತ್ರೀಯರು ಮನೆಗಳ ಸುತ್ತಲೂ ದೀಪಗಳನ್ನು ಬೆಳಗಿಸುವಿಕೆ, ನೆರೆಹೊರೆಯ ಸುಮಂಗಲಿಯರೊಂದಿಗೆ ಮಂಗಳ ದ್ರವ್ಯ, ಫಲಪುಷ್ಪಗಳನ್ನು ಪರಸ್ಪರರು ವಿನಿಮಯಮಾಡಿ, ಹಿರಿಯರ ಆಶೀರ್ವಾದ ಪಡೆಯುವುದು ಸತ್ಸಂಪ್ರದಾಯ.

**ಉತ್ಥಾನದ್ವಾದಶಿಯಂದು ತುಳಸಿಯ ಪೂಜೆಯಿಂದ ದೊರಕಬಹುದಾದ ಫಲ**

ಅಷ್ಟ ನಾಮಗಳಿಂದ ತುಳಸೀ ದೇವಿಯನ್ನು ಯಾರು ಪೂಜಿಸುವರೋ ಅವರಿಗೆ ಅಶ್ವಮೇಧಯಾಗ ಮಾಡಿದಷ್ಟು ಪುಣ್ಯ ಲಭ್ಯ. ಕಾರ್ತಿಕ ಪೌರ್ಣಮಿಯಂದು ತುಳಸಿಯನ್ನು ಪೂಜಿಸುವರು. ಈ ಸಂಸಾರ ಸಾಗರ, ಜನನ ಮರಣ ಸಂಕೋಲೆಯಿಂದ ಬಿಡುಗಡೆ ಪಡೆದು ಶೀಘ್ರದಲ್ಲಿಯೇ ಅವರು ಗೋಲೋಕ ವೃಂದಾವನ ಸೇರಬಲ್ಲರು ಎಂದಿದೆ ಪುರಾಣ. ತುಳಸಿಯ ಜನ್ಮ ದಿನವಾದ ಕಾರ್ತಿಕ ಪೌರ್ಣಮಿಯಂದು ಅಷ್ಟಮಂತ್ರಗಳೊಂದಿಗೆ ತುಳಸಿಯನ್ನು ಪೂಜಿಸಿದವರಿಗೆ ಪುತ್ರ ಸಂತಾನ, ವಿವಾಹಯೋಗ, ಆರೋಗ್ಯ ಭಾಗ್ಯ; ಬಂಧಿತನಿಗೆ ಬಿಡುಗಡೆ; ಮೋಕ್ಷಾಕಾಂಕ್ಷಿಗೆ ಮೋಕ್ಷ ದೊರಕುತ್ತದೆ ಎಂಬುದು ಆಸ್ತಿಕರ ದೃಢ ನಂಬಿಕೆ.

ಶ್ರೀಕೃಷ್ಣನೇ ತುಳಸಿಯನ್ನು ಅಷ್ಟಸ್ತೋತ್ರಗಳಿಂದ ಪೂಜಿಸುತ್ತಾನೆ ಎಂದ ಮೇಲೆ ಈ ಮಂತ್ರದ ಮಹಿಮೆ ಎಂತಹದು ಎಂಬುದನ್ನು ವಿವರಿಸುವ ಅಗತ್ಯವಿಲ್ಲ. (ಆಧಾರ : ಪದ್ಮಪುರಾಣದ ಗೀತಾ ಮಹಾತ್ಮ್ಯ ತುಳಸೀ ದೇವೀ ಮಹಾತ್ಮ್ಯ)

ಉತ್ಥಾನದ್ವಾದಶಿಯಂದು ಭಕ್ತರು ಸಂಭ್ರಮ ಸಡಗರದಿಂದ ತುಳಸಿಯ ವಿವಾಹ ನೆರವೇರಿಸುವರು. ಆ ಬಳಿಕ ಅವರು ಚಾತುರ್ಮಾಸ್ಯದಲ್ಲಿ ಕೈಗೊಂಡ ಎಲ್ಲಾ ವ್ರತಗಳನ್ನೂ ಸಮಾಪ್ತಿಗೊಳಿಸುತ್ತಾರೆ. ಆ ಸಂದರ್ಭದಲ್ಲಿ ಯಾವ ಪದಾರ್ಥಗಳನ್ನು ವರ್ಜ್ಯ ಮಾಡಿರುತ್ತಾರೋ ಆ ಪದಾರ್ಥಗಳನ್ನು ದಾನ ನೀಡಿದ ನಂತರ ತಾವೂ ಸೇವಿಸುತ್ತಾರೆ.

(ಉತ್ಥಾನದ್ವಾದಶಿ : ಕ್ಷೀರಾಬ್ಧಿದ್ವಾದಶಿಯಂದು ನಡೆಸುವ ಪೂಜಾವಿಧಿ ವಿಧಾನ ಕಥಾ ಭಾಗಗಳ ಹೆಚ್ಚಿನ ವಿವರಗಳಿಗಾಗಿ ವ್ರತ ಪುಸ್ತಕವನ್ನು ನೋಡಬಹುದು)

ಇದೆಲ್ಲಾ ಓದಿದ ಮೇಲೆ ವಿವಾಹ ನಡೆಯಬೇಕಾದ್ದು ಸ್ತ್ರೀ ಪುರುಷ ನಡುವೆ. ಹೀಗಿರುವಾಗ, ಒಂದು ಗಿಡಕ್ಕೆ ವಿಷ್ಣು / ಕೃಷ್ಣನೊಡನೆ ವಿವಾಹ ಜರುಗಿಸುವುದು ಎಂದರೆ ಹಾಸ್ಯಾಸ್ಪದವಾಗುವುದಿಲ್ಲವೇ ? ಯಾರೀ ತುಳಸೀ ? ಏನೀಕೆಯ ಪೂರ್ವಜನ್ಮ ವೃತ್ತಾಂತ? ಎಂದು ಪ್ರಶ್ನಿಸಬಹುದು ಕೆಲವು ಓದುಗರು. ಅಂತವರ ಮಾಹಿತಿಗಾಗಿ ತುಳಸಿಯ ಹಿಂದಿನ ಜನ್ಮಗಳನ್ನು ಕುರಿತ ಪ್ರಸಂಗಗಳು ಹೀಗಿವೆ.

ಸಮುದ್ರ ಮಂಥನ ಸಮಯದಲ್ಲಿ ಧನ್ವಂತರೀ ರೂಪಿ ಮಹಾವಿಷ್ಣುವು ಅಮೃತವಿದ್ದ ಸುವರ್ಣ ಕಲಶವನ್ನು ಹಿಡಿದು ಬರುತ್ತಿದ್ದಾಗ ಪರಮಾತ್ಮನ ಕಣ್ಣುಗಳಿಂದ ಅಶ್ರುಗಳು ಕೆಳಗೆ ಬಿದ್ದಾಗ ಅವು ತುಳಸಿಯೆಂಬ ಹೆಣ್ಣಿನ ರೂಪ ತಾಳಿ ಕೂಡಲೇ ತಪಸ್ಸಿಗಾಗಿ ಬದರೀನಾಥದ ಕಡೆಗೆ ಹೊರಟಳಂತೆ. ಆಕೆಯನ್ನು ಯಾರು, ಎಷ್ಟು ತಡೆದರೂ ಕೇಳದೆ ಅರಣ್ಯದಲ್ಲಿ ಘೋರ ತಪಸ್ಸನ್ನು ಆಚರಿಸಿದಳು. ಆಗ ಶ್ರೀಕೃಷ್ಣನೇ ಸ್ವಯಂ ಆಕೆಯ ಬಳಿ ತೆರಳಿ ಆಕೆಯನ್ನು ವಿವಾಹವಾಗುವುದಾಗಿ ಮಾತು ಕೊಟ್ಟ ದಿನ ಇದು ಎಂಬ ಕಾರಣಕ್ಕೆ ಇಂದು ತುಳಸಿಯ ವಿವಾಹ ಆಚರಣೆ ಪದ್ಧತಿ ಜಾರಿಯಲ್ಲಿದೆ. ಭಗವಂತನನ್ನೇ ವಿವಾಹವಾಗಿ ಆತನಿಗೆ ಅತ್ಯಂತ ಪ್ರಿಯಳಾಗಿರುವ ಕಾರಣವೇ ತುಳಸೀ ಪವಿತ್ರ ಸ್ತ್ರೀ ಎಂದು ಪರಿಗಣಿಸಿ, ಇಂದಿನ ವಿವಾಹಗಳಲ್ಲಿ ವಧುವಿನ ಹಸ್ತದಲ್ಲಿ ಸಾಲಿಗ್ರಾಮ ತುಳಸಿ ಇಟ್ಟು ಕನ್ಯಾದಾನ ಮಾಡುವ ಅಭ್ಯಾಸ ಕಂಡುಬಂದಿದೆ. ತುಳಸೀ ಮಾಲೆಯನ್ನು ಧರಿಸಿದವರು ಶುದ್ಧರಾಗುತ್ತಾರೆ ಅವರಿಗೆ ಶ್ರೀಹರಿಯ ರಕ್ಷಣೆಯಿರುತ್ತದೆ ಎಂಬ ನಂಬಿಕೆಯ ಕಾರಣ ಶ್ರೀವೈಷ್ಣವರು ತುಳಸೀ ಮಾಲೆಯನ್ನು ಕಂಠದಲ್ಲಿ ಧರಿಸುತ್ತಾರೆ.

ತುಳಸಿಯ ಜನ್ಮ ವೃತ್ತಾಂತ ಕುರಿತಂತೆ ದೇವೀ ಭಾಗವತ ಹೀಗೆ ತಿಳಿಸಿದೆ – ಧರ್ಮಧ್ವಜ ಮಾಧವೀ ದಂಪತಿಗಳು ಸಂತಾನ ಭಾಗ್ಯಕ್ಕಾಗಿ ಕಠಿಣ ತಪಸ್ಸು ಮಾಡಿ, ಶ್ರೀ ಮಹಾವಿಷ್ಣುವನ್ನು ಮೆಚ್ಚಿಸಿ, ಅವರ ವರದಿಂದ ಪಡೆದ ಮಗಳೇ ತುಳಸೀ, ಈಕೆಯ ಜನನ, ಕಾರ್ತಿಕ ಮಾಸದ ಶುಕ್ಲ ಪಕ್ಷದ ಪೂರ್ಣಿಮೆ ಶುಕ್ರವಾರವಾದ ಕಾರಣ, ಈಕೆ ಮಹಾಲಕ್ಷ್ಮೀ ಸ್ವರೂಪಳೆಂದು ಭಾವಿಸಲಾಯಿತು. ಈಕೆಯ ಅನುಪಮ ರೂಪ, ಲಾವಣ್ಯ ಸಂಪನ್ನತೆಯನ್ನು ಬೇರೆ ಯಾರೊಂದಿಗೂ ತುಲನೆ (ಹೋಲಿಸಲಾಗದ) ಮಾಡಲಾಗದ ಕಾರಣ, ಈಕೆ ತುಳಸೀ ಎಂಬ ಅನ್ವರ್ಥನಾಮದಿಂದ ಪ್ರಸಿದ್ಧಳಾದಳು ಎನ್ನಲಾಗಿದೆ.

**ಸ್ತ್ರೀಯಾಗಿದ್ದ ತುಳಸೀ ಗಿಡವಾಗಿದ್ದು ಏಕೆ**

ಪುರಾಣದ ಅನುಸಾರ, ಹಿಂದೆ ಸುದಾಮನೆಂಬ ಪಾರಿಷದನು (ಸೇವಕ) ರಾಧೆಯ ಶಾಪದಿಂದ ಭೂಲೋಕದಲ್ಲಿ ಶಂಖಚೂಡನೆಂಬ ರಾಕ್ಷಸನಾಗಿ ಗೋಕುಲದಲ್ಲಿ ಜನಿಸಿ, ತುಳಸೀ ಎಂಬ ಕನ್ಯೆಯನ್ನು ವಿವಾಹವಾದನು. ಈಕೆ ಶ್ರೀಮಹಾವಿಷ್ಣುವಿನ ಪರಮಭಕ್ತೆ ಮತ್ತು ಮಹಾಪತಿವ್ರತೆ. ಶಂಖಚೂಡನು ಅಸುರನಾದರೂ ತಪಸ್ಸು ಮಾಡಿ 'ಅಭ್ಯಂಗ ಕವಚ'ವನ್ನು ಸಂಪಾದಿಸಿದ್ದು, ದೇಹಬಲದ ಕಾರಣ ಅವನು ಲೋಕ ಕಂಟಕನಾದನು. ಇವನ ಬಾಧೆಯನ್ನು ಸಹಿಸಲಾರದೆ ತಮ್ಮ ರಕ್ಷಣೆಗಾಗಿ ದೇವತೆಗಳು ಮಹಾವಿಷ್ಣುವಿನ ಮೊರೆ ಹೊಕ್ಕರು. ಪತ್ನಿಯ ದೈವಭಕ್ತಿ ಹಾಗೂ ಪತಿಭಕ್ತಿಯೇ ಅಸುರನಿಗೆ ರಕ್ಷಾಕವಚವಾಗಿತ್ತು. ಈ ರಹಸ್ಯವನ್ನರಿತ ಶ್ರೀ ಮಹಾವಿಷ್ಣುವು ತನ್ನೆಡೆಗೆ ಮನ ತಿರುಗುವಂತೆ ಆಕೆಗೆ ಮನಃಚಾಂಚಲ್ಯ ಉಂಟುಮಾಡಿದನು. ಪರಿಣಾಮವಾಗಿ ಆಕೆ ಕಲ್ಮಶ ಮನವುಳ್ಳವಳಾದಳು. ಕೂಡಲೇ ಶಂಖಚೂಡನ ಕವಚವು ಒಡೆಯಿತು. ಇದೇ ಸಮಯ ಕಾದಿದ್ದ ರುದ್ರನು ಶಂಖಚೂಡನೊಡನೆ ಯುದ್ಧ ಮಾಡಿ ಅವನನ್ನು ಸುಲಭವಾಗಿ ಸಂಹರಿಸಿದನು. ಪತಿಯ ನಿಧನ, ತನ್ನ ಮನಃಚಾಂಚಲ್ಯತೆಗೆ ಕಾರಣ ಮಹಾವಿಷ್ಣುವೇ ಎಂಬುದನ್ನು ಅರಿತ ತುಳಸಿಯು ಮಹಾ ಕೋಪಿತಳಾಗಿ, ನೀನು ಪಾಷಾಣ ಹೃದಯಿ, ನೀ ಮಾಡಿದ ತಪ್ಪಿಗೆ, ಕಲ್ಲಾಗಿ ಹೋಗು' ಎಂದು ಮಹಾವಿಷ್ಣುವಿಗೆ ಶಾಪವಿತ್ತಳು.

ಕೋಪಿತಳಾದ ತುಳಸಿಯನ್ನು ವಿಷ್ಣುವು ಸಮಾಧಾನಪಡಿಸಿ, "ನಿನಗೆ ಈ ಕ್ಷಣವೇ ಮುಕ್ತಿ ಸಿಗುತ್ತದೆ, ಈ ಕೂಡಲೇ ನೀನು ಭೂಲೋಕಕ್ಕೆ ತೆರಳು, ಅಲ್ಲಿ ನೀನು ಗಂಡಕಿ ನದಿಯಾಗಿ ಹರಿಯುತ್ತೀಯೆ, ನಿನ್ನ ತಲೆಯ ಕೂದಲು ಪವಿತ್ರವಾದ ತುಳಸೀ ಗಿಡವಾಗಲಿ, ಶಂಖಚೂಡನು ಅಲ್ಲಿ ಶಂಖವಾಗಿರಲಿ, ನಿನ್ನ ಶಾಪದಂತೆ ನಾನು ಗಂಡಕಿ ನದಿಯಲ್ಲಿ ಸಾಲಿಗ್ರಾಮ ಶಿಲೆಯಾಗಿ ನೆಲೆಸುವೆ ಎಂದು ಶ್ರೀಮಹಾವಿಷ್ಣುವು ತುಳಸಿಯನ್ನು ಹರಸಿದನು. ಈ ಕಾರಣದಿಂದಲೇ, ಸಾಲಿಗ್ರಾಮ ಶಿಲೆಯನ್ನು ಮಹಾವಿಷ್ಣುವಿಗೆ ಪ್ರಿಯವಾದ ತುಳಸಿಯಿಂದ ಪೂಜಿಸುವ ಪದ್ಧತಿ ಭೂಲೋಕದಲ್ಲಿದೆ. ತುಳಸೀ ಗಿಡಕ್ಕೆ ಹೀಗೆ ದೈವತ್ವ ಲಭಿಸಿದೆ ಎಂದಿದೆ ಪುರಾಣ ಕಥೆ.

ಮತ್ತೊಂದು ಪುರಾಣ ಕಥೆಯ ಪ್ರಕಾರ, ವಿಷ್ಣು ಸ್ವರೂಪಿ ಶ್ರೀಕೃಷ್ಣನನ್ನೇ ಪತಿ ಯನ್ನಾಗಿಸಿಕೊಳ್ಳಲು ತುಳಸಿ ತಪಸ್ಸು ಮಾಡಿ, ಬ್ರಹ್ಮನನ್ನು ಮೆಚ್ಚಿಸಿ, ಶ್ರೀಕೃಷ್ಣನ ಪ್ರೀತಿಗೆ ಪಾತ್ರಳಾದಳು. ಆದರೂ, ಮುಂದೊಂದು ದಿನ, ಕಾರಣಾಂತರದಿಂದ, ಆಕೆ ಶ್ರೀಕೃಷ್ಣನ ಶಾಪಕ್ಕೆ ಗುರಿಯಾಗಿ, ಸಸ್ಯ ರೂಪಿಯಾಗಿ, "ಬೃಂದಾವನೀ" ಎಂಬ ಹೆಸರಿನಲ್ಲಿ ವಿಶ್ವ ಪೂಜನೀಯಳಾದಳು. ಅದಕ್ಕಾಗಿಯೇ, ತುಳಸಿಗೆ ಪ್ರೀತಿಪಾತ್ರನಾದ ಶ್ರೀಕೃಷ್ಣನು "ವೃಂದಾವನಾಂತ ಸಂಚಾರೀ ತುಳಸೀ ಧಮ ಭೂಷಣಃ ತುಳಸಿಯಿಂದ ಅಲಂಕೃತನಾಗಿ ವೃಂದಾವನದಲ್ಲಿ ವಿಹರಿಸತಕ್ಕವನು" ಎಂಬ ವರ್ಣನೆಯಿದೆ. 'ಒಂದು ದಳ ಶ್ರೀ ತುಳಸಿ, ಒಂದು ಬಿಂದೋದಕವು' – 'ಒಲ್ಲನೋ ಹರಿ ಕೊಳ್ಳನೋ ತುಳಸಿ ಇಲ್ಲದ ಪೂಜೆಯ' ಇತ್ಯಾದಿಯಾಗಿ ದಾಸಶ್ರೇಷ್ಠ ಪುರಂದರರೂ ತುಳಸಿಯ ಮಹಿಮೆಯ ಕುರಿತು ತಮ್ಮ ಕೀರ್ತನೆಗಳಲ್ಲಿ ಹಾಡಿರುವುದು ಈ ಸಂದರ್ಭದಲ್ಲಿ ಸ್ಮರಣಾರ್ಹ.

ಪ್ರಸಕ್ತ ವರ್ಷದ ನವಂಬರ್ 16ರಂದು ಉತ್ಥಾನದ್ವಾದಶಿ, ಕ್ಷೀರಾಬ್ಧಿದ್ವಾದಶಿ, ತುಳಸೀ ಆರಾಧನೆಯ ದಿನವಾಗಿದ್ದು, ಅಂದು ಲೋಕಪೂಜಿತಳನ್ನು ಶ್ರದ್ಧಾ ಭಕ್ತಿಗಳಿಂದ ಆರಾಧಿಸಿ ಆಕೆಯ ಹಾಗೂ ಶ್ರೀಮಹಾವಿಷ್ಣುವಿನ ಅನುಗ್ರಹಕ್ಕೆ ಪಾತ್ರರಾಗೋಣ.

*ಕೃಪೆ : "ಶ್ರೀ ಶಂಕರ ಕೃಪಾ"*

# ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಯಶೋದಾ ಶರ್ಮ

## ಶ್ರೀಮತಿ ಯಶೋದಾ ಶರ್ಮ

(ಶ್ರೀ ಕರುಣಾಕರ ಶರ್ಮರ ಧರ್ಮಪತ್ನಿ)

ತನ್ನ ಸಾತ್ವಿಕ ಬದುಕಿನಲ್ಲಿ ಆದರ್ಶ ಪತ್ನಿ, ಮಮತೆಯ ಮಾತೆ, ಸಹೃದಯೀ ಗೃಹಿಣಿಯಾಗಿದ್ದು,
ನಮ್ಮೆಲ್ಲರ ಪ್ರೀತಿಗೆ ಪಾತ್ರರಾಗಿದ್ದ ಶ್ರೀಮತಿ ಯಶೋದಾ ಶರ್ಮ ಅವರು
ದಿನಾಂಕ **14-8-2021**ರಂದು ನಮ್ಮನ್ನು ಅಗಲಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ.

ಅವರ ದಿವ್ಯಾತ್ಮಕ್ಕೆ ಚಿರಶಾಂತಿ ಲಭಿಸುವಂತೆ ಪ್ರಾರ್ಥಿಸಬೇಕೆಂದು ತಮ್ಮೆಲ್ಲರನ್ನು ಕೋರುವ –
**ಕರುಣಾಕರ ಶರ್ಮ ಮಂಗಳೂರು (ಪತಿ) ಪುತ್ರಿಯರು, ಅಳಿಯಂದಿರು ಮತ್ತು ಕುಟುಂಬಸ್ಥರು**


# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಬೆಂಗಳೂರು ನಿವಾಸಿ ಶ್ರೀಮತಿ ಆಶಾ ರಾವ್ ಮತ್ತು ಶ್ರೀ ಭಾಗ್ಯಚಂದ್ರ ರಾವ್ ದಂಪತಿಗಳ ಸುಪುತ್ರಿ ಚಿ। ಸೌ। ಮೇಘನಾ ಹಾಗೂ ಕುಕ್ಕೆಹಳ್ಳಿ ಶ್ರೀ ಮಹೇಶ ರಾವ್ ಮತ್ತು ಶ್ರೀಮತಿ ರಾಜೇಶ್ವರಿ ದಂಪತಿಗಳ ಸುಪುತ್ರ ಚಿ। ಕಾರ್ತಿಕ್ ಇವರ ವಿವಾಹವು 'ಶಾರದಾ ಕಲ್ಯಾಣ ಮಂಟಪ ಉಡುಪಿ'ಯಲ್ಲಿ ನಡೆದಿದ್ದು ಇದರ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಉಪಮೇಯರ್‌ರವರಾದ ಕೆ. ಸುಮಂಗಲಾ, ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀಮತಿ ಕನಕವಲ್ಲಿ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಉಪಾಧ್ಯಕ್ಷೆ ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀ ನಂದಿಕೂರು ಜನಾರ್ದನ ರಾವ್ ಉಪಸ್ಥಿತರಿದ್ದರು.



ಬಪ್ಪನಾಡು ಶ್ರೀ ಸೋಮಶೇಖರ ರಾವ್, ನಿವೃತ್ತ SBI ಅಧಿಕಾರಿ ಮತ್ತು ಶ್ರೀಮತಿ ವಿಜಯಲಕ್ಷ್ಮೀ ರಾವ್ ಸ್ಮರಣಾರ್ಥ ಅವರ ಮಕ್ಕಳಾದ ವಸುಧಾ, ದಯಾ, ದೀಪಾ ಮತ್ತು ಅವರ ಕುಟುಂಬಸ್ಥರು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ಈ ಮೊದಲು ರೂ. **50,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಬೆಂಗಳೂರಿನ ನಿವೃತ್ತ ಇಂಜಿನಿಯರ್ ಶ್ರೀ ಗೋಪಾಲಕೃಷ್ಣ ರಾವ್ ಇವರು ತಮ್ಮ ಅಣ್ಣ ದಿ। ರಾಮಚಂದ್ರ ರಾವ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **50,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಮಂಗಳೂರು ನಿವಾಸಿ ಶ್ರೀಮತಿ ಸೌಮ್ಯ ಮತ್ತು ಶ್ರೀ ರಾಮ್‌ಪ್ರಸಾದ್ ದಂಪತಿಗಳು ತಮ್ಮ **16**ನೇ ವಿವಾಹ ವಾರ್ಷಿಕೋತ್ಸವದ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **27,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಉಪಸ್ಥಿತರಿದ್ದರು.



ಪ್ರತಿಷ್ಠಿತ ಕುಂಬಾಟ್ ಮನೆತನದವರು ತಮ್ಮ ಕುಟುಂಬದವರ ಸಹಯೋಗದೊಂದಿಗೆ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ವಸತಿ ನಿಲಯ 'ಶಿವಸದನ'ಕ್ಕೆ ರೂ. **50,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ತಲೇಕಿ ಮನೆ ದಿ। ಕಡಬ ವಿಠಲ್ ರಾವ್ ಇವರ ಪತ್ನಿ ಶ್ರೀಮತಿ ಲಲಿತಮ್ಮ ಚೆಕ್ ಹಸ್ತಾಂತರಿಸಿದರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭದಲ್ಲಿ ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀಮತಿ ಕನಕವಲ್ಲಿ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್ ಉಪಸ್ಥಿತರಿದ್ದರು.



ಕೀರ್ತಿಶೇಷ ಬೆಳ್ಳೆ ರಾಮ ರಾವ್ ಸ್ಮರಣಾರ್ಥ ಅವರ ಕುಟುಂಬಸ್ಥರು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ಮತ್ತೊಮ್ಮೆ ರೂ. **20,000/-** ದೇಣಿಗೆ ನೀಡಿ ತಮ್ಮ ಕೊಡುಗೆಯನ್ನು ರೂ. **50,000/-**ಕ್ಕೆ ಹೆಚ್ಚಿಸಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* Sri Harsha Kumar Kedige, President, Shree Subrahmanya Sabha (R.), Kodialbail, Mangalore - 3
*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.